Registration Date : MU/ACC/Ph.D.Reg/CR. 248–71/2018–19

ಕೊಡಗಿನ ಕೊಡವ ಭಾಷಿಕ ಸಮುದಾಯಗಳ ಚಾರಿತ್ರಿಕ ಅಧ್ಯಯನ : ಸಮಾಜ ಮತ್ತು ಸಂಸ್ಕೃತಿ

ಪೀಠಿಕೆ:

ಜಗತ್ತು ಎಷ್ಟೇ ವೇಗವಾಗಿ ಬದಲಾದರೂ ವಿಕಾಸದ ಹಾದಿಯನ್ನೊಮ್ಮೆ ಹಿಂತಿರುಗಿ ನೋಡಿದಾಗ ಕಾಲಚಕ್ರ ಮರುಕಳಿಸಿದಂತೆ ಭಾಸವಾಗುವುದು. ಇತಿಹಾಸವನ್ನು ಗತಿಸಿದ ಘಟನೆಗಳ ಒಟ್ಟು ಸಾರವೆಂದರೆ, ಸಂಸ್ಕೃತಿ ಮಾನವನ ಅನುಭವದ ಸಾರವೆನ್ನಬಹುದು. ಖ್ಯಾತ ಇತಿಹಾಸಕಾರ ಇ.ಎಚ್. ಕಾರ್ ತಮ್ಮ ಕೃತಿಯಾದ "ವಾಟ್ ಈಸ್ ಹಿಸ್ಟರಿ" ಕೃತಿಯಲ್ಲಿ ಇತಿಹಾಸ ಎಂದರೇನು? ಎಂಬ ಪ್ರಶ್ನೆಗೆ ವ್ಯಾಖ್ಯಾನವನ್ನು ನೀಡಿದ್ದಾರೆ. ಇವರ ಪ್ರಕಾರ ಇತಿಹಾಸವೆಂದರೆ ವರ್ತಮಾನ ಮತ್ತು ಗತದ ನಡುವೆ ಇತಿಹಾಸಕಾರ ನಡೆಸುವ ನಿಲ್ಲಿಸಲಾಗದ, ಒಂದು ಸಂವಾದ ಮತ್ತು ಚಾರಿತ್ರಿಕ ಸತ್ಯ ಮತ್ತು ಇತಿಹಾಸಕಾರನ ನಡುವೆ ನಡೆಯುವ ನಿರಂತರ ಮಾತುಕತೆ[1]. ಒಟ್ಟಿನಲ್ಲಿ ಇತಿಹಾಸವನ್ನು ನಾವು ಗತದ ಒಟ್ಟು ಸಾರವೆಂದು ಪರಿಗಣಿಸಬಹುದು. ನಮ್ಮ ಪೂರ್ವಿಕರ ಅನುಭವದ ಹೆಜ್ಜೆಗಳು, ಪಾಲಿಸಿದ ಜೀವನ ರೀತಿ–ನೀತಿ, ವಾಸ್ತವ್ಯ ಶೈಲಿ, ಆರಾಧನಾ ಕಲೆ, ಹಸಿವು–ದಣಿವು ಇವುಗಳಿಗೆ ಕ್ರಮವಾಗಿ ಅನುಸರಿಸಿದ ಜೀವನೋಪಾಯ ಮಾರ್ಗಗಳು, ದಣಿವಾರಿಸಿಕೊಳ್ಳಲು ಅನುಸರಿಸಿದ ಹಾಡು–ಕುಣಿತ, ಕುಡಿತದಂತಹ ಮೋಜು ಮನರಂಜನಾ ಕ್ರಮಗಳು, ಎಲ್ಲರನ್ನು ಏಕಕಾಲದಲ್ಲಿ ಒಂದುಗೂಡಿಸಲು ಏರ್ಪಡಿಸಿದ ಗ್ರಾಮದೇವತಾ ಆರಾಧನಾ ಕಲೆ ಮತ್ತು ನರಬಲಿ, ಪ್ರಾಣಿಬಲಿಯಂತಹ ವ್ಯವಸ್ಥೆಗಳು ಹೀಗೆ ಹತ್ತು ಹಲವು ಅಂಶಗಳು ನಮ್ಮ ಇಂದಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಾಗಿ ಗುರುತಿಸಿಕೊಂಡಿವೆ. ಇವೆಲ್ಲವುಗಳನ್ನು ಕಾಲಮಾನಕ್ಕೆ ಅನುಗುಣವಾಗಿ ಅಲ್ಲಲ್ಲಿ ಹಲವು ಬದಲಾವಣೆ ಮಾಡಿಕೊಂಡು ಪುನಾರಾವರ್ತಿತ ಜೀವನ ಕ್ರಮವನ್ನು ಅನುಸರಿಸುತ್ತಿದ್ದೇವೆ. ಬಲ್ಲವನೇ ಬಲ್ಲ ಬೆಲ್ಲದ ಸವಿಯ ಎನ್ನುವ ಕನ್ನಡದ ನಾಣ್ಣುಡಿಯಂತೆ ಪ್ರತಿಯೊಂದು ಸಮುದಾಯಕ್ಕಿರುವ ಸಂಪ್ರದಾಯ–ಪದ್ದತಿ, ಸಾಮಾಜಿಕ–ಧಾರ್ಮಿಕ ಆಚರಣೆ ಮತ್ತು ನಂಬಿಕೆಯ ಮೌಲ್ಯಗಳನ್ನು ಅರ್ಥೈಸಿಕೊಂಡವನಿಗೆ ಮಾತ್ರ ಪ್ರತಿಯೊಂದು ಕ್ರಮದ ಹಿಂದಿನ ಸಾಮಾಜಿಕ ಮೌಲ್ಯ ಅರಿವಾಗುವುದು.

1ಉದಯ ಬಾರ್ಕೂರು, ಇತಿಹಾಸದ ಶೋಧ ಗತದ ಹುಡುಕಾಟ, ಆಕೃತಿ ಪಬ್ಲಿಕೇಷನ್ಸ್,2015, ಪು.ಸಂ. 6

ಭೂಮಿಯ ಸೃಷ್ಟಿ ಹಾಗೂ ಮಾನವನ ವಿಕಾಸ ಏಕಕಾಲದಲ್ಲಾಯಿತೇ ಅಥವಾ ಇಂತಹದ್ದೆ ಕಾಲದಲ್ಲಾಯಿತೇ ಎನ್ನುವುದು ಸುಲಭದ ವಿಚಾರವೇನಲ್ಲ. ಮನುಕುಲದ ವಿಕಾಸ ಸಿದ್ಧಾಂತಗಳನ್ನು ಊಹೆಗಳಿಂದ ಮತ್ತು ಕೆಲವೊಮ್ಮೆ ವೈಜ್ಞಾನಿಕ ದೃಷ್ಟಿಯಿಂದ ಶಾಸ್ತ್ರಬಲ್ಲ ಪಂಡಿತರು, ವಿಜ್ಞಾನಿಗಳು ತಿಳಿಸಿಕೊಟ್ಟರು. ಆದರೆ ಅವರ ವಿಚಾರವೇ ಅಂತಿಮವಲ್ಲ, ಕಾಲಕಾಲಕ್ಕೆ ಹೊಸ ಚಿಂತನೆಗಳು, ಸಿದ್ಧಾಂತಗಳು, ಪಂಡಿತರು, ವಿಚಾರವಾದಿಗಳು ಹುಟ್ಟಿಕೊಂಡು ವಿವಿಧ ಆಯಾಮಗಳಲ್ಲಿ ಮಾನವನ ಜೀವನ ಕ್ರಮದಲ್ಲಾದ ಬದಲಾವಣೆಗಳನ್ನು ಗ್ರಹಿಸಿ ಸಂಶೋಧನೆಗೆ ಒಳಪಡಿಸುತ್ತಿದ್ದಾರೆ. ಸಂಶೋಧನಾ ವಿಷಯಗಳು, ವಿಧಾನಗಳು, ಮಾರ್ಗಗಳು, ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಲೇ ಇವೆ. ಹಾಗೆಯೇ ಕಾಲಚಕ್ರದ ಸುಳಿಯಲ್ಲಿ, ಇತಿಹಾಸದ ಗರ್ಭದಲ್ಲಿ ಹುದುಗಿಹೋದ ಅಸಂಖ್ಯಾತ ಘಟನೆಗಳು ನಮ್ಮನ್ನು ಸಂಶೊಧನೆಗೆ ಹಾಗೂ ಚಿಂತನೆಗೆ ಓರೆ ಹಚ್ಚಿವೆ. ನಾಗರೀಕತೆ ವಿಕಾಸವಾದಂತೆಲ್ಲಾ ಮಾನವ ಸಮಾಜ ಅಮೂಲಾಗ್ರ ಬದಲಾವಣೆಗೊಳಪಟ್ಟು ಸತ್ಯದ ಹುಡುಕಾಟಕ್ಕೆ ಪ್ರೇರೇಪಣೆ ನೀಡುತ್ತದೆ. ಪಳಮೆಗಳಲ್ಲಿ ಉಕ್ತವಾದ ಕೊಡಗನ್ನೇ ಗ್ರಹಿಸಿ ನೋಡಿದಾಗ ಬದಲಾವಣೆಯ ಕಿಡಿ ನಾಡನ್ನು ವ್ಯಾಪಿಸಿ ಸಾಮಾಜಿಕ ಜೀವನದಲ್ಲಿ ನವಕ್ರಾಂತಿಯನ್ನುಂಟು ಮಾಡಿದ ಬಗೆಯನ್ನು ಕೊಡಗಿನ ಸಮುದಾಯಗಳ ಜೀವನ ಕ್ರಮಗಳಲ್ಲಿ ಕಾಣಬಹುದಾಗಿದೆ.

ಮನಸ್ಸೋಲ್ಲಾಸ ನೀಡುವ ಪ್ರಾಕ್ರತಿಕ ಬೆಡಗು, ಅಗಣ್ಯ ಸಸ್ಯ, ಪ್ರಾಣಿ ಪ್ರಭೇದ, ಜಲಜೀವರಾಶಿಗಳಿರುವ ಸಂಪತ್ಭರಿತ ಭಾರತ ಸದಾ ಆಕರ್ಷಣೆಯ ಕೇಂದ್ರವಾಗಿ ಎಲ್ಲರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ವೈವಿಧ್ಯಮಯ ಸಂಸ್ಕೃತಿ, ಪಾರಂಪರಿಕ ಜೀವನ ಪದ್ಧತಿ, ಬದುಕಲು ಯೋಗ್ಯವಾದ ಭೂಮಿ, ಆರೋಗ್ಯವಂತ ಸಮಾಜ ಇವೆಲ್ಲಾ ಭಾರತವನ್ನು ವಿಶ್ವದ ರಾಷ್ಟ್ರಗಳು ಕಣ್ಣೆತ್ತಿ ನೋಡುವಂತೆ ಮಾಡಿದೆ. ಇಂತಹ ಶ್ರೀಮಂತ ನಾಡಿನಲ್ಲಿ ವಿವಿಧ ಜನಾಂಗಗಳಿವೆ, ಅವುಗಳಿಗೆ ತನ್ನದೇ ಆದ ಪೌರಾಣಿಕ ಹಿನ್ನಲೆಯಿದೆ. ಭಾರತೀಯ ಸಮಾಜದಲ್ಲಿ ಜಾತಿ ಎಂಬ ಪರಿಕಲ್ಪನೆ ಹುಟ್ಟಿಕೊಂಡ ಬಗ್ಗೆ ನಿರಂತರ ಚರ್ಚೆಗಳಾಗುತ್ತಲೆ ಇವೆ. ವೈದಿಕ ಸಾಹಿತ್ಯವು ಉಲ್ಲೇಖಿಸುವ ಜಾತಿ ಪದ್ಧತಿಯನ್ನು ಹೊರತುಪಡಿಸಿದರೆ, ನಿಖರವಾಗಿ ಭಾರತೀಯ ಸಮುದಾಯಗಳನ್ನು ಜಾತಿ ಆಧಾರಿತವಾಗಿ ವರ್ಗೀಕರಿಸಿದವರು ಆಂಗ್ಲರು. ತಮಗೆ ತೋಚಿದ ರೀತಿಯಲ್ಲಿ ಸಮಾಜದ ವರ್ಗೀಕರಣ ಮಾಡಿ ಜಾತಿಯ ಕಿಚ್ಚು ವ್ಯಾಪಕವಾಗಿ ಹರಡುವಂತೆ ಮಾಡಿದರು. ಜಾತಿ ರಾಜಕಾರಣದ ಭಾಗವಾಗಿ ವಸಾಹತು ಆಡಳಿತ ವರ್ಗಕ್ಕೆ ವರದಾನವಾಗಿ ಪರಿಣಮಿಸಿತೆಂದರೆ ತಪ್ಪಾಗಲಾರದು. 1784 ರಲ್ಲಿ ವಿಲಿಯಂ ಜೋನ್ಸ್‌ರಿಂದ ಪ್ರಾರಂಭವಾದ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಭಾರತೀಯ ಸಮುದಾಯ, ಸಂಸ್ಕೃತಿ ಇವೆಲ್ಲವನ್ನು ಅಧ್ಯಯನ ಮಾಡಲಾರಂಭಿಸಿತು. ಈ ಸಂಸ್ಥೆಯನ್ನು ಬಂಗಾಳದ

ಸರ್ಕಾರವು ಸೆಂಟರ್ ಆಫ್ ರೆಫರೆನ್ಸ್ ಬ್ಯೂರೋ ಅಂಡ್ ಇನ್‌ಫಾರ್‌ಮೇಶನ್ ಎಂದೂ ಕೂಡ ಕರೆಯುತ್ತಿತ್ತು. ಹರ್ಬಟ್ ರಿಸ್ಲೆಯ ನೇತೃತ್ವದಲ್ಲಿ ರಚನೆಯಾದ ಎತ್ನೋಗ್ರಾಫಿಕ್ ಸರ್ವೆ ಆಫ್ ಇಂಡಿಯಾ ಪೂರ್ಣ ಪ್ರಮಾಣದಲ್ಲಿ ಮಾನವ ಶಾಸ್ತ್ರೀಯ ವಿವರಗಳನ್ನು ಕಲೆಹಾಕಲಾರಂಭಿಸಿತು. ಜಾತಿ ಮತ್ತು ಸಮುದಾಯಗಳ ವ್ಯಾಪಕ ಅಧ್ಯಯನ ಇಲ್ಲಿಂದಲೇ ಆರಂಭವಾಯಿತು. ಈ ರೀತಿಯ ಅಧ್ಯಯನಗಳು ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ವ್ಯಾಪಕತೆಯನ್ನು ಪಡೆದುಕೊಂಡು ಆದಿವಾಸಿ, ಮೂಲನಿವಾಸಿ, ಬುಡಕಟ್ಟು, ಅಲೆಮಾರಿ ಎಂಬಿತ್ಯಾದಿ ಸಮುದಾಯಗಳಾಗಿ ವರ್ಗೀಕರಿಸಲ್ಪಟ್ಟು ಪ್ರಸ್ತುತ ಸ್ವತಂತ್ರ ಅಧ್ಯಯನ ಶಾಖೆಗಳಾಗಿ ಬೆಳೆದು ನಿಂತಿದೆ. ಮಾನವಶಾಸ್ತ್ರಜ್ಞರ ಅಭಿಪ್ರಾಯದಂತೆ ವಿಶಾಲ ಭಾರತದಲ್ಲಿ ಪುರಾತನ ಕಾಲದಿಂದ ಮೊದಲ್ಗೊಂಡು ಸುಮಾರು 3,000ಕ್ಕೂ ಅಧಿಕ ಕಸುಬು ಆಧಾರಿತ ವರ್ಣ–ಪಂಗಡಗಳು ಅಸ್ತಿತ್ವದಲ್ಲಿವೆ ಎನ್ನುತ್ತಾರೆ.

ಪ್ರತಿಯೊಂದು ಸಮುದಾಯವು ತನ್ನದೆ ಆದ ವಿಶಿಷ್ಟತೆ ಮತ್ತು ಪರಂಪರೆಯಿಂದ ಹೆಸರುವಾಸಿಯಾಗಿದ್ದು ಅಧ್ಯಯನಾಸಕ್ತರ ಗಮನ ಸೆಳೆಯುತ್ತದೆ. ಅಂತೆಯೇ ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಗಡಿ ಜಿಲ್ಲೆ ಕೊಡಗು. ವಿಭಿನ್ನ ಉಡುಗೆ–ತೊಡುಗೆ, ವಿಶಿಷ್ಟ ಸಂಸ್ಕೃತಿ ಹಾಗೂ ದಕ್ಷಿಣ ಗಂಗೆ ತೀರ್ಥರೂಪಿಣಿ ಕಾವೇರಿಯ ಜನ್ಮಭೂಮಿ, ಅಗಸ್ತ್ಯನ ತಪೋಭೂಮಿ, ಪ್ರವಾಸಿಗರ ಕಾಶ್ಮೀರ, ಪರಿಸರ ಪ್ರೇಮಿಯ ಹಸಿರಿನ ವನರಾಶಿ, ಕವಿ ವರ್ಣನೆಯ ಪೊಮ್ಮಾಲೆ ಕೊಡಗು ಎಂದು ಹೆಸರುವಾಸಿಯಾಗಿರುವ ಕೊಡಗಿನ ಸೊಬಗು ಸಾಲುಗಳಲ್ಲಿ ಸೆರೆಹಿಡಿದರೂ ವರ್ಣನೆಗೂ ನಿಲುಕದು. ಇಲ್ಲಿಯು ಕೂಡ ಜನಾಂಗ ವೈವಿಧ್ಯತೆ, ಭಾಷಾ ವೈವಿಧ್ಯತೆ, ಜಾನಪದ ವೈವಿಧ್ಯತೆ, ಸಾಂಸ್ಕೃತಿಕ ವೈವಿಧ್ಯತೆ, ಭೌಗೋಳಿಕ ವೈವಿಧ್ಯತೆಯನ್ನು ಕಾಣಬಹುದಾಗಿದೆ. ಹೀಗೆ ವಿಶಿಷ್ಟತೆಯಿಂದ ಕೂಡಿರುವುದರಿಂದಲೇ ಇಲ್ಲಿ ಸಂಶೋಧನೆಗೆ ವಿಫುಲ ಅವಕಾಶಗಳಿವೆ. ಇತಿಹಾಸದ ಪಿತಾಮಹ ಹೆರೊಡೊಟಸ್ ಹೇಳುವಂತೆ ನೈಲ್ ನದಿ ಈಜಿಪ್ಟ್ ನಾಗರೀಕತೆಗೆ ಕೊಡುಗೆಯನ್ನು ನೀಡಿದಂತೆ, ಕೊಡಗಿನಲ್ಲಿ ಕಾವೇರಿ ನದಿಯು ನಾಗರೀಕತೆಯ ಬೆಳವಣಿಗೆಗೆ ಕಾರಣಕರ್ತಳಾಗಿದ್ದಾಳೆ ಎಂದರೆ ಅತಿಶಯೋಕ್ತಿಯಲ್ಲ[2].

ಕ್ಷತ್ರಿಯರ ನಾಡೆಂದು ಖ್ಯಾತಿಪಡೆದ ಕೊಡಿಮಲೆನಾಡು, ಶಾಸನಗಳಲ್ಲಿ ಮಲೆಸಾಸಿರ್ವರೆಂದು, ಸಂಗಂ ಸಾಹಿತ್ಯದಲ್ಲಿ ಕುಡುಕಂ ಆಗಿ, ಕಾಲಾಂತರದಲ್ಲಿ ಬ್ರಿಟೀಷರಿಂದ ಆಂಗ್ಲೀಕರಣಕ್ಕೊಳಗಾಗಿ ಕೂರ್ಗ್ ಎಂತಲೂ, ಇಂದು ಕೊಡಗು ಎಂದಾಗಿ ಪ್ರಖ್ಯಾತಿ ಪಡೆದ ಕರ್ನಾಟಕದ ಪುಟ್ಟ ಜಿಲ್ಲೆ. ಕನ್ನಡ, ಮಲಯಾಳಂ, ಅರೆಭಾಷೆ, ಎರವ, ಮರಾಠಿ, ತೆಲುಗು, ತಮಿಳು, ತುಳು, ಬ್ಯಾರಿ ಮುಂತಾದ ಭಾಷಿಕರಿಂದ ಸುತ್ತುವರಿಯಲ್ಪಟಿದೆ. ಇಲ್ಲಿನ ಜನರ ಮಾತೃಭಾಷೆ ಕೊಡವ/ಕೊಡಗು, ವ್ಯವಹಾರಿಕ ಭಾಷೆ ಕನ್ನಡ.

---

2 ವಿಕ್ರಂ ಕಾಂತಿಕೆರೆ.(ಅನು), ಕಾವೇರಿ ಕಥನ., ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು ,2020, ಪು. ಸಂ.4

ಮೂಲತಃ ಕೊಡಗಿನ ಕೊಡವ ಭಾಷಿಕರಲ್ಲಿ ಇಂದು ಚಾಲ್ತಿಯಲ್ಲಿರುವ ಆಯಾಯ ವೃತ್ತಿಗಳೇ ಜಾತಿ ಸೂಚಕವಾಗಿ ಅಸ್ತಿತ್ವಕ್ಕೆ ಬಂದಿರುವ ಸಾಧ್ಯತೆಗಳೇ ಹೆಚ್ಚು. ಆದರೆ ನಿಖರ ಮಾಹಿತಿಯ ಕೊರತೆಯಿಂದಾಗಿ ಪಟ್ಟೋಲೆ ಪಳಮೆ ಉಲ್ಲೇಖಿಸುವ ಜಾತಿಯಾಧಾರಿತ ಧಾರ್ಮಿಕ ಕಟ್ಟುಪಾಡುಗಳನ್ನೆ ಅವಲಂಭಿಸಲಾಗಿವೆ. 19ನೇ ಶತಮಾನದ ವಸಾಹತುಗಾರರಾದ ಬಿ.ಎಲ್.ರೈಸ್, ಕೊನ್ನೂರ್, ಮೊಗ್ಲಿಂಗ್, ಎಡ್ಗರ್ ಥರ್ಸ್ಟನ್, ನೆಸ್‌ಫೀಲ್ಡ್ ಈ ಮುಂತಾದವರು ತಮ್ಮ ಬರವಣಿಗೆಯಲ್ಲಿ ಕೊಡಗಿನ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಬರೆಯುವಾಗ ಆಳುವ ವರ್ಗ, ದುಡಿಯುವ ವರ್ಗ ಎಂದು ವರ್ಗೀಕರಿಸಿದೆ. ಪರಸ್ಪರ ನಂಬಿಕೆ ಮತ್ತು ಅವಲಂಭನೆ ಸಮುದಾಯಗಳ ನಡುವೆ ಕೊಂಡಿಯಂತೆ ವರ್ತಿಸುತ್ತವೆ. ಗ್ರಾಮೀಣ ಪ್ರದೇಶಗಳೆಂದರೆ ಹತ್ತು ಹಲವಾರು ಕಸುಬುದಾರರಿಂದ ಕೂಡಿರುವ ಸಮೂಹ. ದೈನಂದಿನ ಬದುಕಿನ ನಿರ್ವಹಣೆಗಾಗಿ ಒಂದು ಸಮುದಾಯವು ಮತ್ತೊಂದನ್ನು ಅವಲಂಭಿಸುವುದು ಅನಿವಾರ್ಯವಾಗಿದೆ. ಉದಾಹರಣೆಗೆ ಕೊಡವ ಸಮುದಾಯದ ಕುಟುಂಬದ ಮದುವೆ ಸಮಾರಂಭಕ್ಕೆ ಕೆಂಬಟ್ಟಿ, ಐರಿ, ಹಜಾಮ/ ನಾಯಿಂದ, ಮಡಿವಾಳ, ಮೇದ ಈ ಮುಂತಾದ ಸಮುದಾಯಗಳು ಸಹಕರಿಸಿದರೆ ಮಾತ್ರ ಸಂಪ್ರದಾಯ ಸಂಪೂರ್ಣವಾಗುವುದು. ಈ ಮೇಲೆ ಹೇಳಲಾದ ಎಲ್ಲಾ ಭಾಷಿಕ ಸಮುದಾಯಗಳು ತನ್ನದೇ ಆದ ಕರ್ತವ್ಯವನ್ನು ಗ್ರಾಮೀಣರ ಬದುಕಿನಲ್ಲಿ ನಿರ್ವಹಿಸುವ ಮೂಲಕ ಕೊಡವರ ಮತ್ತು ಕೊಡವ ಭಾಷಿಕ ಸಮುದಾಯದ ಜೀವನಕ್ರಮಗಳಾದ ಹುಟ್ಟಿನಿಂದ ಸಾವಿನವರೆಗಿನ ಪ್ರತಿಯೊಂದು ಆಚರಣೆಯಲ್ಲಿ ಪಾಲುದಾರರೇ ಆಗಿರುವರು.

ಸಾಮಾನ್ಯ ನೋಟಕ್ಕೆ 21 ಭಾಷಿಕಸಮುದಾಯಗಳ ಆಚರಣೆ, ನಂಬಿಕೆ, ಭಾಷಾ ಬಳಕೆ ಏಕ ರೀತಿಯದ್ದಾಗಿ ಕಂಡರೂ ಕೊಡವ ಸಂಸ್ಕೃತಿಯು ಬಹುರೂಪಿಯಾಗಿ ಅಸ್ತಿತ್ವದಲ್ಲಿರುವುದು ಗೋಚರಿಸದ ಅಂಶವಾಗಿದೆ. ಕೊಡಗಿನ ಮೂಲನಿವಾಸಿಗಳು ಯಾರೆಂದು ನಿರ್ಧರಿಸುವುದೇ ಒಂದು ಸವಾಲಾಗಿದೆ. ಏಕೆಂದರೆ ಇಲ್ಲಿ ಬಹುಭಾಷಾ ಸಂಸ್ಕೃತಿಯಿದ್ದು ಬುಡಕಟ್ಟು ಪಂಗಡಗಳು, ಅಲೆಮಾರಿ ವಲಸೆ ಸಮುದಾಯಗಳು ಒಂದೇ ನೆಲೆಯಲ್ಲಿ ಸಹಬಾಳ್ವೆ ಜೀವನ ಸಾಗಿಸುತ್ತಿದ್ದಾರೆ.

ಒಂದರ್ಥದಲ್ಲಿ ಕೊಡಗಿನಲ್ಲಿರುವ ಕೊಡವ ಭಾಷಿಕರೆಲ್ಲಾರೂ ಒಂದೇ ಗುಂಪಿಗೆ ಸೇರುವ ಸಮುದಾಯವಾಗಿದ್ದು ಇಲ್ಲಿ ಬಹುಸಂಸ್ಕೃತಿ ಅಸ್ತಿತ್ವದಲ್ಲಿದೆ ಎಂದರೆ ತಪ್ಪಾಗಲಾರದು. ಕೊಡಗಿನ ಸಮಾಜದೊಳಗೊಂದು ಸಮಾಜವು ಅಸ್ತಿತ್ವದಲ್ಲಿದ್ದು ಕೊಡವ ಭಾಷೆಯನ್ನು ಮಾತೃಭಾಷೆಯನ್ನಾಗಿ ಹಾಗೂ ಕೊಡವ ಸಂಸ್ಕೃತಿಯನ್ನು ಪರಿಪಾಲಿಸುತ್ತಿರುವ ಬಲಿಷ್ಟ, ಮಧ್ಯಮ ಹಾಗೂ ಕೂಲಿಕಾರ್ಮಿಕ , ಸೇವಕ ವರ್ಗಗಳಿಂದ ಆವೃತವಾಗಿದೆ. ಕೊಡವ ಭಾಷಿಕರ ಸಂಸ್ಕೃತಿಯನ್ನು ಬಹುಸಂಸ್ಕೃತಿಯೆಂದು ವರ್ಣಿಸಲು ನನ್ನ ಮುಂದಿರುವ ಕಾರಣವಿಷ್ಟೆ. ಒಂದೇ ಭಾಷೆ, ಒಂದೇ ಇತಿಹಾಸ, ಏಕರೀತಿಯ ಧಾರ್ಮಿಕ ನಂಬಿಕೆ ,

ಆಚರಣೆಗಳು, ಮತ್ತು ಒಂದೇ ಭೂಭಾಗಕ್ಕೆ ಸೇರಿದವರು. ಆದರೆ ಸಂಶೋಧನಾ ವಲಯದಲ್ಲಿ ಸಂಸ್ಕೃತಿಯನ್ನು ಕುರಿತು ಬಳಸುವಾಗ ಹಲವು ಪದಪುಂಜಗಳು ಲಭ್ಯವಿದೆ. ಪ್ರಧಾನ ಸಂಸ್ಕೃತಿ, ಅಧೀನ ಸಂಸ್ಕೃತಿ, ದೇಸಿ ಸಂಸ್ಕೃತಿ, ಮೂಲ ಸಂಸ್ಕೃತಿ, ಬಹುರೂಪಿ ಸಂಸ್ಕೃತಿ ಇವೆ ಮುಂತಾದವುಗಳು. ಸಾಮಾನ್ಯವಾಗಿ ವಸಾಹತು ಬರಹಗಾರರು, ನಡಿಕೇರಿಯಂಡ ಚಿಣ್ಣಪ್ಪನವರು ಕೊಡಗಿನ ಸಮುದಾಯಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ರೂಪಿಸುವ ಸಂಧರ್ಭದಲ್ಲಿ ಕೊಡವ ಸಮುದಾಯ ಹಾಗೂ ಅವರು ಅನುಸರಿಸುತ್ತಿರುವ ಸಂಸ್ಕೃತಿಯನ್ನು ಪ್ರಧಾನ ಸಂಸ್ಕೃತಿಯೆಂದು, ಉಳಿದ ಭಾಷಿಕ ವರ್ಗವು ಅವರನ್ನು ಅನುಕರಿಸುತ್ತಿರುವ ಅಧೀನ ಸಂಸ್ಕೃತಿಯೆಂತಲೂ ಬಿಂಬಿಸುತ್ತಾರೆ. ಇಲ್ಲಿ ಒಬ್ಬ ಇತಿಹಾಸದ ವಿದ್ಯಾರ್ಥಿನಿಯಾದ ನನ್ನನ್ನು ಕಾಡುವ ಪ್ರಶ್ನೆಯೆಂದರೆ ಕೊಡಗಿನ ಕೊಡವ ಸಮುದಾಯವನ್ನೊಳಗೊಂಡಂತೆ ಎಲ್ಲಾ ಭಾಷಿಕ ವರ್ಗದ ಮೂಲ ಅಸ್ಪಷ್ಟವಾಗಿರುವಾಗ ಇಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿಯನ್ನು ವಿದ್ವಾಂಸರು ಹೇಗೆ ನಿರ್ಣಯಿಸಿದರು ಎಂಬುವುದೆ ಗೊಂದಲಮಯವಾಗಿದೆ. ಕೊಡವರೆ ಇಲ್ಲಿನ ಮೂಲ ಸಂಸ್ಕೃತಿಯ ಪಾಲುದಾರರೆಂತಾದರೆ ಉಳಿದ ಭಾಷಿಕ ವರ್ಗಗಳ ಪಾತ್ರವೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಸಂಶೋಧನೆ ಮತ್ತು ಸತ್ಯಾನ್ವೇಶಣೆಯಷ್ಟೆ ನಮ್ಮ ಮುಂದಿರುವ ಮಾರ್ಗ. ವಸಾಹತು ಬರವಣಿಗೆಯಲ್ಲಾದ ಮೇಲ್ವರ್ಗದ ಇತಿಹಾಸ ರಚನೆಯಿಂದಾಗಿ ಉಳಿದ ಸಮುದಾಯಗಳು ತಮ್ಮ ಪಾಲುದಾರಿಕೆಯನ್ನು ಕಳೆದುಕೊಳ್ಳುವಂತಾಯಿತು.

ಕೊಡವ ಭಾಷಿಕರಲ್ಲೆಲ್ಲಾ ಕಾಣಸಿಗುವ ಸಾಮಾನ್ಯ ಅಂಶವೆಂದರೇ ಪೂರ್ವಜನ ಆರಾಧನೆ ಅವನೆ ಗುರು ಕಾರಣ. ಗುರು ಈತ ತಮ್ಮ ವಂಶವನ್ನು ಕಟ್ಟಿ ಬೆಳೆಸಿದವನೆಂಬ ನಂಬಿಕೆ, ಅವನ ಆರಾಧನೆಗೆಂದೆ ನಿರ್ಮಿಸಲಾದ ಕೈಮಡಗಳು, ಅವಿಭಕ್ತ ಕುಟುಂಬಕ್ಕೆ ಕೊಂಡಿಯಂತಿದ್ದ ಐನ್ಮನೆಗಳು, ಕೊಡಗಿನ ಉದ್ದಗಲಗಳಲ್ಲಿ ಸಾಮಾನ್ಯವಾಗಿವೆ. ಈ ಎಲ್ಲಾ ಭಾಷಿಕರ ಧರ್ಮಾಚರಣೆಗಳು ನಿಸರ್ಗದೊಂದಿಗೆ ಬೆಸೆದುಕೊಂಡಿದ್ದು ಕೈಲ್‌ಪೊವ್ವದ್, ತುಲಾ ಚಂಗ್ರಾದಿ, ಪುತ್ತರಿ ಇವೆ ಕೃಷಿ ಕೇಂದ್ರಿತ ಪ್ರಮುಖ ಹಬ್ಬಗಳು ಪುತ್ತರಿ ಹಬ್ಬದ ನಂತರ ಮಂದ್ ಎಂಬ ನಿರ್ದಿಷ್ಟ ಸ್ಥಳದಲ್ಲಿ ಜಾತಿಯ ತಾರತಮ್ಯವಿಲ್ಲದೆ ಭಾಷಿಕ ವರ್ಗವು ಕುಣಿದು ಕುಪ್ಪಳಿಸಿ ಸಂಸ್ಕೃತಿಯ ಶ್ರೀಮಂತಿಕೆಯನ್ನು ಮುಂದುವರೆಸಲು ಶ್ರಮಿಸುವುದು ಇವೆಲ್ಲಾ ವರ್ಗ ಸಂಘರ್ಷದ ನಡುವೆ ಇರುವ ಸಾಮರಸ್ಯದ ಧ್ಯೋತಕಗಳಾಗಿವೆ.

ಮನೆಪೆದಗಳು ವಂಶಪಾರಂಪರ್ಯದ ಹೆಗ್ಗುರುತುಗಳಾಗಿದೆ. ಪ್ರತಿಯೊಂದು ಸಮುದಾಯದ ಕುಟುಂಬಕ್ಕೂ ಮನೆಪೆದಗಳಿವೆ, ಮಲೆಪೆದಗಳಿವೆ ಹಾಗೂ ಮನೆದೇವರುಗಳಿದ್ದಾರೆ. ಅವೆಂದರೆ ಪತ್ತುಕೂಟ್ ಪಾತಾಳ ಮೂರ್ತಿ, ವಿಷ್ಣುಮೂರ್ತಿ, ಶಾಸ್ತಾವು, ಚೌಂಡಿ, ಮಂದ್ರಮೂರ್ತಿ, ಕುಟ್ಟಿಚಾತ, ಭದ್ರಕಾಳಿ, ಪೊವ್ವದಿ, ಮಕ್ಕಿಶಾಸ್ತಾವು, 101ಮೂರ್ತಿ, ಬೋಟೆಕಾರ ಅಯ್ಯಪ್ಪ, ಭೂತನಾಥ ಅಯ್ಯಪ್ಪ, ಪಾಶಾಣಮೂರ್ತಿ ಇವೆ

ಮುಂತಾದವುಗಳು. ಸಾಮಾನ್ಯವಾಗಿ ಪೂಜಿಸಲ್ಪಡುವ ಆರಾಧ್ಯ ದೇವರುಗಳೆಂದರೆ ನಾತ, ಅಯ್ಯಪ್ಪ, ಮಾದೇವ, ಪೊವ್ವದಿ, ಕುಳಿಯ, ಗಣಪತಿ, ಕಾವೇರಿ, ಇಗ್ಗುತ್ತಪ್ಪ.

1821ರಲ್ಲಿ ಲಿಂಗರಾಜನ ಹುಕ್ಕುಂನಾಮೆಯ 25ನೇ ಅಪ್ಪಣೆಯಲ್ಲಿ 23 ಜಾತಿಗಳನ್ನು ಗುರುತಿಸಿದ್ದಾರೆ. ಅವರ ಪೈಕಿ ಅಯಿರಿ, ಕಣಿಯ, ಕೆಂಬಟ್ಟಿ, ಮಲೆಯ, ಕೊಡಗ, ಅಮ್ಮಗಳು, ಹೆಗ್ಗಡೆಗಳ ಉಲ್ಲೇಖವಿದೆ. ರಿಕ್ತರ್‌ರವರು ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಫೌಂಡ್ ಇನ್ ಕೂರ್ಗ್ ಕೃತಿಯಲ್ಲಿ ಸುಮಾರು 23 ಕೊಡವ ಬಾಷಿಕ ಸಮುದಾಯಗಳ ವಿವರಣೆಯನ್ನು ನೀಡಿದ್ದಾರೆ. ಅವೆಂದರೆ ಅಮ್ಮ ಕೊಡವ, ಬೂಣೆಪಟ್ಟ, ಬಣ್ಣ, ಬಾಣಿ, ಕಾಪಾಲ/ ಕಾಟಾಳ, ಕೊಡವ, ಐರಿ, ಹೆಗ್ಗಡೆ, ಕೆಂಬಟ್ಟಿ, ಪೂಮಲೆ ಕುಡಿಯ, ಮಾರಂಗಿ, ಮಲಿಯ, ಪಣಿಕ, ಮೇದ, ಗೊಲ್ಲ, ಕೋಲೆಯ, ಕೋಯವ, ಕಣಿಯ, ನಾಯಿಂದ, ಕೊಡವ ನಾಯರ್, ಕೊಡವ ಮಾಪಿಳ್ಳೆ, ಕೊಡವ ಹಜಾಮ[3].

ಅಧ್ಯಯನದ ಉದ್ದೇಶ:

ಪ್ರಸ್ತುತ ಚಾರಿತ್ರಿಕ ಸಂಶೋಧನೆಗೆ “ಕೊಡಗಿನ ಕೊಡವ ಭಾಷಿಕ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿ ಎನ್ನುವ ಶೀರ್ಷಿಕೆಯನ್ನು ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದು, ಮೇಲ್ನೋಟಕ್ಕೆ ಕೊಡವ ಸಮುದಾಯ ಉಳಿದ ಭಾಷಿಕ ವರ್ಗದ ನೆರವಿಲ್ಲದೆ ಏಕಾಂಗಿಯಾಗಿ ಸಂಸ್ಕೃತಿಯನ್ನು ಉಳಿಸಿ ಪೋಷಿಸುವುದು ಕಷ್ಟಕರ. ಕಾರಣ ಹುಟ್ಟಿನಿಂದ ಸಾಯುವವರೆಗಿನ ಸಾಂಪ್ರದಾಯಿಕ ಆಚರಣೆಗಳಲ್ಲಿ ಒಂದಲ್ಲ ಒಂದು ಸಂಧರ್ಭದಲ್ಲಿ ಒಬ್ಬರನ್ನೊಬ್ಬರು ಅವಲಂಭಿಸಿಯೇ ಸಂಸ್ಕೃತಿಯನ್ನು ಜೀವಂತವಾಗಿರಿಕೊಂಡು ಜೀವಿಸುತ್ತಿದ್ದಾರೆ. ಆದ್ದರಿಂದ ಇಲ್ಲಿ ಕೇವಲ ಕೊಡವರನ್ನುದ್ಧೇಶಿಸಿ ಇತರ ಭಾಷಿಕರನ್ನು ಕಡೆಗಣಿಸುವಂತಿಲ್ಲ.

ಕೊಡವ ಸಂಸ್ಕೃತಿ ಪ್ರಧಾನವಾಗಿ ಕಂಡರೂ, ಕಂಡುಕಾಣದಂತಿರುವ ಉಳಿದ ಭಾಷಿಕರ ಜೀವನದ ಅವಿಭಾಜ್ಯ ಅಂಗವಾಗಿರುವುದು ಕೂಡಾ ಕೊಡವ ಸಂಸ್ಕೃತಿಯೇ. ಆದ್ದರಿಂದ ಇತ್ತೀಚಿನ ದಶಕಗಳಲ್ಲಿ ಕೊಡವ ಭಾಷೆ ಹಾಗೂ ಕೊಡವ ಸಂಸ್ಕೃತಿ ಇದನ್ನು ಕೊಡಗು ಭಾಷೆ ಮತ್ತು ಕೊಡಗರ ಸಂಸ್ಕೃತಿ ಎಂದು ಕರೆಯಬೇಕೆನ್ನುವ ಚರ್ಚೆಗಳು ವಿದ್ವಾಂಸರ ವಲಯದಲ್ಲಿ ಸಂಚಲನ ಮೂಡಿಸುತ್ತಿದೆ. ಇಂದಿಗೂ ಕೊಡಗಿನವರನ್ನು ಹೊರತುಪಡಿಸಿದರೆ ಕೊಡವ ಸಂಸ್ಕೃತಿ ಕೇವಲ ಕೊಡವರದ್ದೆನ್ನುವ ಭಾವನೆ ಕೊಡಗಿನಾಚೆಗಿರುವ ಜನರದ್ದಾಗಿದೆ, ಅದು ಜನರ ತಪ್ಪಲ್ಲ ಬದಲಾಗಿ ಮಾಹಿತಿಯ ಕೊರತೆ ಆಗಿದೆ.

3 ವಿಜಯ್ ಪೂಣಚ್ಚ(ಸಂ), ರಾಜೇಂದನಾಮೆ :ಮರು ಓದು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018, ಪು.ಸಂ. 12

ಆದ್ದರಿಂದ ಕೊಡವ ಭಾಷಿಕ ಸಮುದಾಯಗಳನ್ನು ಹಾಗೂ ಕೊಡವ ಸಂಸ್ಕೃತಿ, ಆಚಾರಗಳ- ವಿಚಾರ ಹಾಗೂ ಐತಿಹಾಸಿಕ ಪರಂಪರೆಯ ಭಾಗವೇ ಆಗಿರುವ ಭಾಷಿಕ ಸಮುದಾಯವನ್ನು ಸಮಾಜಕ್ಕೆ ಪರಿಚಯಿಸುವ ಹೊಣೆಗಾರಿಕೆ ಮತ್ತು ಅಗತ್ಯತೆ ಎದ್ದು ಕಾಣುತ್ತಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮೂರು ದಶಕಗಳಿಂದ ತಳಸಮುದಾಯದ ಅಧ್ಯಯನವನ್ನು ದಾಖಲಿಸುವ ಕಾರ್ಯ ನಡೆಸುತ್ತಿದೆ, ಆದರೇ ಕೊಡಗಿನ ಕೆಂಬಟ್ಟಿಗಳು, ಯರವರು ಮತ್ತು ಕುಡಿಯರನ್ನು ಹೊರತುಪಡಿಸಿದರೆ ಇನ್ಯಾವುದೇ ಅಲೆಮಾರಿ ಸಮುದಾಯವಾಗಲಿ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಇತರರನ್ನಾಗಲೀ ಅಧ್ಯಯಿನಿಸಿ ಸಮಗ್ರ ಇತಿಹಾಸ ದಾಖಲು ಮಾಡುವ ಕಾರ್ಯ ಸಾಕಾರವಾಗಲೇ ಇಲ್ಲ.

- ಪುರಾತನ ಹಿನ್ನಲೆ ಇರುವ ಶ್ರೀಮಂತ ಕೊಡವ ಸಂಸ್ಕೃತಿಯನ್ನು ಯಥಾವತ್ತಾಗಿ ಅನುಸರಿಸುತ್ತಿರುವ ಕೊಡವ ಭಾಷಿಕ ಸಮುದಾಯಗಳ ಅಧ್ಯಯನ ಹಾಗೂ ಜನನದಿಂದ –ಮರಣದವೆರೆಗೂ ಆಚರಣೆಯಲ್ಲಿರುವ ಸಾಂಪ್ರದಾಯಿಕ ಪದ್ಧತಿ-ಪರಂಪರೆಯನ್ನು ದಾಖಲು ಮಾಡುವುದಾಗಿದೆ.
- ಕರ್ನಾಟಕ ರಾಜ್ಯದ ಒಳಗು- ಹೊರಗು ಕೊಡವ ಭಾಷಿಕ ಸಮುದಾಯಗಳು ಹಾಗೂ ಕೊಡಗಿನ ಮೂಲನಿವಾಸಿಗಳ ಕುರಿತು ಜ್ಞಾನ ಪಸರಿಸುವುದು.
- ಸಂಶೋಧನಾ ಅಧ್ಯನಯಲ್ಲಿ ಕೊಡವ ಭಾಷೆ, ಸಾಹಿತ್ಯ ,ಜನಾಂಗ ವೈವಿಧ್ಯ, ಹಾಗೂ ಕೊಡಗಿನ ಚರಿತ್ರೆಯು ಮತ್ತಷ್ಟು ರೂಪುಗೊಳ್ಳಲಿ ಎನ್ನುವ ಆಶಯ ಹೊಂದಿದೆ.
- ಕೊಡವ ಭಾಷಿಕ ಸಮುದಾಯದ ಅಸ್ಮಿತೆಯ ಹುಡುಕಾಟ
- ನಾಗರೀಕತೆಯ ಪ್ರಭಾವದಿಂದ ಪರಂಪರಾಗತ ಕ್ರಮದಲ್ಲಾದ ಪ್ರಗತಿಯನ್ನು ಕಂಡುಕೊಳ್ಳುವುದು.
- ಕೊಡಗಿನ ಮೂಲನಿವಾಸಿಗಳನ್ನು ಗುರುತಿಸುವುದು, ಕೊಡವ ಸಂಸ್ಕೃತಿಗೆ ಕೊಡವ ಭಾಷಿಕ ಸಮುದಾಯಗಳ ಕೊಡುಗೆಯನ್ನು ದಾಖಲಿಸುವುದು.
- ಅಳಿವಿನ ಅಂಚಿನಲ್ಲಿರುವ ಕೆಲವು ಕೊಡವ ಭಾಷಿಕ ಮೂಲ ನಿವಾಸಿಗಳ ಚರಿತ್ರೆಯ ನಿರೂಪಣೆ.
- ಕೊಡವ ಭಾಷಿಕ ಸಮುದಾಯಗಳಲ್ಲಿ ಉಪ ಪಂಗಡಗಳ ಹುಟ್ಟು ಮತ್ತು ಬೆಳವಣಿಗೆ ಹಾಗೂ ಪ್ರಸ್ತುತತೆಯನ್ನು ಮರುಪರಿಶೀಲನೆಗೆ ಒಳಪಡಿಸುವುದು.

- ಕೊಡವ ಭಾಷಿಕ ಸಮುದಾಯಗಳಲ್ಲಿ ಕಂಡು–ಕಾಣದಂತಿರುವ ಭಾಷಾ ಸಾಮರಸ್ಯ ಹಾಗೂ ಸಾಮಾಜಿಕ, ಧಾರ್ಮಿಕ, ಆರ್ಥಿಕ ಅನನ್ಯತೆಯನ್ನು ಮೂಲ ಉದ್ಧೇಶಕ್ಕೆ ದಕ್ಕೆಯಾಗದಂತೆ ದಾಖಲಿಸುವುದು.
- ಕೊಡವ ಭಾಷೆಯ ಐತಿಹಾಸಿಕ ಹಿನ್ನಲೆಯನ್ನು ಅರ್ಥೈಸುವುದು.
- ಆಧುನಿಕತೆಯ ಪ್ರಭಾವಕ್ಕೊಳಗಾಗಿ ಹಲವು ಪರ್ಯಾಯ ಉದ್ಯೋಗವನ್ನು ಅನುಸರಿಸಿ ಪಾರರಂಪರಿಕ ವೃತ್ತಿ ಮತ್ತು ಸಾಂಸ್ಕೃತಿಕ ಪಲ್ಲಟನೆಗೊಳಪಟ್ಟ ಸಮುದಾಯಗಳನ್ನು ಗುರುತಿಸುವುದು.
- ಜನಸಂಖ್ಯಾ ಕೊರತೆಯಿಂದಾಗಿ ವಂಶ ಅಥವಾ ಸಮುದಾಯವು ಅಳಿವಿನ ಅಂಚಿಗೆ ಬಂದಂತಹ ಸಂಧರ್ಭದಲ್ಲಿ ನೆರೆಯ ಸಂಸ್ಕೃತಿಯೊಂದಿಗೆ ಬೆರೆತುಕೊಂಡಿರುವ ಕೊಡವ ಭಾಷಿಕ ಸಮುದಾಯಗಳನ್ನು ಗುರುತಿಸುವುದು.
- ಜನಪದೀಯ ಸಾಂಸ್ಕೃತಿಕ ಮೌಲ್ಯವನ್ನು ಗುರುತಿಸುವುದು.
- ಕೃಷಿ ಸಂಸ್ಕೃತಿಯಲ್ಲಿ ಭಾಷಿಕ ಸಮುದಾಯಗಳ ಪಾತ್ರವನ್ನು ಚರ್ಚಿಸುವುದು.
- ಬದಲಾವಣೆಗಳಿಗೆ ಕೊಡವ ಭಾಷಿಕ ಸಮುದಾಯದ ಸ್ಪಂದನವನ್ನು ದಾಖಲಿಸುವುದು.

ಕೊಡಗಿನ ಕೊಡವ ಭಾಷಿಕರನ್ನು ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಕೋಲ್ ಮಿಂಚಿನಂತೆ ಮಿಂಚಿ ಮರೆಯಾಗುವ ಕೊಡಗು ನಾಡಿನ ಪೂರ್ವಚರಿತ್ರೆ ಹೇಗೆ ವಿಕಾಸದ ಹಾದಿಯನ್ನು, ನಾಗರೀಕತೆಯ ಹೊಸ್ತಿಲನ್ನು ದಾಟಿ ಇತಿಹಾಸ ಕಾಲಕ್ಕೆ ಕಾಲಿಟ್ಟಿತ್ತು ಎನ್ನುವುದೇ ಕೌತುಕದ ಸಂಗತಿ. ಸಾಹಿತ್ಯಿಕ ಆಕರಗಳು ಗತಘಟನೆಗಳನ್ನು ತೆರೆದಿಡಲು ಸೋತಾಗ ಪೌರಾಣಿಕ ಐತಿಹ್ಯಗಳು ಮತ್ತು ಮೌಖಿಕ ಪರಂಪರೆ ನಮ್ಮ ಕೈಹಿಡಿಯುತ್ತವೆ. ಪೂರ್ವ ಇತಿಹಾಸ ಕಾಲದಿಂದ ಇತಿಹಾಸ ಕಾಲದವರೆಗಿನ ಕೊಡಗಿನ ಚರಿತ್ರೆಯನ್ನು ಮಬ್ಬು ಆವರಿಸಿದಂತೆ ಅಸ್ಪಷ್ಟವಾಗಿವೆ.

ಕೊಡಗಿನ ಚರಿತ್ರೆ, ಭೂಪಟ ಹಾಗೂ ವಾಸ್ತವ್ಯದ ವಿವರಗಳನ್ನು ವ್ಯವಸ್ಥಿತವಾಗಿ ಅಧ್ಯಯಿನಿಸಲು ಸಾಧ್ಯವಾಗುವುದು 1834ರ ನಂತರದ ಬ್ರೀಟಿಷ್ ದಾಖಲೆಗಳಿಂದಷ್ಟೇ. ಹಾಗೆಂದ ಮಾತ್ರಕ್ಕೆ ಕೊಡಗಿನ ಬಗೆಗೆ ದಾಖಲೆಗಳೇ ಇಲ್ಲವೆಂದರ್ಥವಲ್ಲ. ಸ್ಕಂದ ಪುರಾಣ, ಸಂಘಂ ಸಾಹಿತ್ಯವು, ಕೊಡಗನ್ನು ಆಳ್ವಿಕೆಮಾಡಿದ ರಾಜರ ಆಡಳಿತ ದಾಖಲೆಗಳು, ಶಾಸನಗಳು ಲಭ್ಯವಿದೆ. ಗ್ರೀಕ್ ಇತಿಹಾಸ ರಚಿಸಿದ ಹೆರೊಡೆಟಸ್‌ನಂತೆ ಕೊಡಗಿನ ಇತಿಹಾಸ ರಚಿಸಲು ಇತಿಹಾಸಕಾರ ಮತ್ತು ಐತಿಹಾಸಿಕ ಪ್ರಜ್ಞೆಯ ಕೊರತೆ ಇತ್ತೆ ವಿನಃ ಐತಿಹಾಸಿಕ

ಅಂಶಗಳದ್ದಲ್ಲ, ಚರಿತ್ರೆಯ ದಾಖಲು ಕಾರ್ಯದ ಬಗ್ಗೆ ಯಾರೂ ಎಚ್ಚರವಹಿಸಿದಂತಿಲ್ಲ. ಕೊಡಗಿನ ಕೊಡವ ಭಾಷೆಗೆ ಲಿಪಿ ಇಲ್ಲದಿದ್ದುದರ ಪರಿಣಾಮವಾಗಿ ಕೊಡಗಿನ ಇತಿಹಾಸವು ದಾಖಲಾಗದೇ ಇರಲು ಒಂದು ಕಾರಣವೂ ಆಗಿರಬಹುದು. ಅದೇನೇ ನ್ಯೂನ್ಯತೆಗಳಿದ್ದರೂ ಕೊಡಗಿನ ಚರಿತ್ರೆಯೆನ್ನುವುದು ಬ್ರಿಟೀಷರ ಕೊಡುಗೆಗಳಲ್ಲೊಂದಾಗಿದ್ದು ಹತ್ತು ವರ್ಷಗಳಿಗೊಮ್ಮೆ ನಡೆದ ಜನಸಂಖ್ಯಾ ವರದಿಗಳು, ಇಂಪೀರಿಯಲ್ ಗೆಜೆಟಿಯರ್‌ಗಳು, ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ವರದಿಗಳು, ಕೊಡಗಿಗೆ ಭೇಟಿ ನೀಡಿದ ಪ್ರವಾಸಿಗರ ಟಿಪ್ಪಣಿಗಳು ಕೊಡಗಿನ ಇತಿಹಾಸ ರಚನೆಗೆ ಪ್ರಾಥಮಿಕ ದತ್ತಾಂಶಗಳನ್ನೊದಗಿಸುವ ಮಾಹಿತಿ ಕಣಜವಾಗಿರುತ್ತದೆ.

ವಸಾಹತು ಬರಹಗಾರರ ವಿಭಿನ್ನ ಪ್ರಯತ್ನದಿಂದಾಗಿ 19ನೇ ಶತಮಾನದಲ್ಲಿ ಕೊಡಗಿನ ಚರಿತ್ರೆ ದಾಖಲು ಕಾರ್ಯ ಆರಂಭಗೊಂಡು ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಇತಿಹಾಸ ರೂಪುಗೊಂಡವು. ಮೊಗ್ಲಿಂಗ್‌ರವರ "ಕೂರ್ಗ್ ಮೇಮ್ವಾ" (1985) ಗ್ರಂಥವೊಂದರಲ್ಲೇ ಕುಟುಂಬ ರಚನೆ ವ್ಯವಸ್ಥೆ, ಸಂಪ್ರದಾಯ ಸಿದ್ಧಾಂತಗಳು, ಮೂಢನಂಬಿಕೆ, ಸಾಮಾಜಿಕ, ಆರ್ಥಿಕ ಪರಿಕಲ್ಪನೆಗಳು ಅವಿಭಕ್ತ ಕುಟುಂಬದ ಪರಿಕಲ್ಪನೆ, ಜಮ್ಮ ಭೂ ಹಿಡುವಳಿಯ ಬಗ್ಗೆ ಚರ್ಚಿಸಲಾಗಿದೆ. ಮೊಗ್ಲಿಂಗ್ ಮತ್ತು ವೈಬ್ಸ್‌ರವರ "ದಸ್ ಕೂರ್ಗ್ ಲ್ಯಾಂಡ್" (1860) ಈ ಕೃತಿಯಲ್ಲಿ 19ನೇ ಶತಮಾನದ ಕೊಡಗಿನಲ್ಲಿ ಇದ್ದ ಮೂಢನಂಬಿಕೆಗಳು, ಜಾತಿಪದ್ಧತಿ, ಹಾಗೂ ವಿವಿಧ ಬುಡಕಟ್ಟು ಜನಾಂಗಗಳ ಬಗೆಗೆ ಮಾಹಿತಿ ನೀಡುತ್ತದೆ. ರಿಕ್ಟರ್‌ರವರ "ಗೆಜೆಟಿಯರ್ ಆಫ್ ಕೂರ್ಗ್" ಕೃತಿಯು ಕೊಡಗಿನ ರಾಜಕೀಯ, ಸಮಾಜ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ವಿವಿಧ ಸ್ತರಗಳನ್ನು ವಿವರಿಸುತ್ತಾರೆ. ರಿಕ್ಟರ್‌ರವರ "ಎಥ್ನೋಗ್ರಾಫಿಕಲ್ ಕಂಪೇಡಿಯಂ" ಕೃತಿಯು ಬುಡಕಟ್ಟು ಹಾಗೂ ಜನಾಂಗೀಯ ವೈಶಿಷ್ಟತೆಯ ವಿವರಗಳನ್ನು ಒಳಗೊಂಡಿದೆ.

ಕೊನೂರುವರ "ಕೊಡಗು ಸರ್ವೆ" (1817) ಇದು ಸೆನ್ಸಸ್ ವರದಿ ಸಂಗ್ರಹವಾಗಿದ್ದು, ಜನಾಂಗೀಯ ಪಟ್ಟಿ ಆದಿನಿವಾಸಿ ಬುಡಕಟ್ಟುಗಳು ಹಾಗೂ ಸ್ಥಳ ವಿವರಗಳನ್ನು ಒಳಗೊಂಡಿದೆ. ಕೋಲ್‌ರವರ "ಕೂರ್ಗ್ ಸಿವಿಲ್ ಲಾ" ಕೃತಿಯಲ್ಲಿ 1870ರ ಸಂಧರ್ಭದಲ್ಲಿ ಕೊಡಗಿನ ಸಾಮಾಜಿಕ ವ್ಯವಸ್ಥೆಯ ಕುರಿತು ಮಾಹಿತಿ ನೀಡುತ್ತದೆ. ಲೇವಿಸ್ ರೈಸ್ "ಕೂರ್ಗ್ ಗೆಜೆಟಿಯರ್" (1878) ಮತ್ತು "ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್", ಕೃತಿಗಳು ಕೊನೂರು ಮತ್ತು ಮೊಗ್ಲಿಂಗ್ ಗೆಜೆಟಿಯರ್‌ಗಳಲ್ಲಿನ ವಿಸ್ತೃತ ಮಾಹಿತಿಯನ್ನು ನೀಡುವುದಲ್ಲದೆ ಕೊಡಗಿಗೆ ಸಂಬಂಧಿಸಿದ ಶಾಸನಗಳನ್ನು ಪಟ್ಟಿಮಾಡಲಾಗಿದೆ.

20ನೇ ಶತಮಾನವು ಕೊಡಗಿನ ಚರಿತ್ರೆಯಲ್ಲಿ ಕೃತಿ ಹಾಗೂ ಕೃತಿಕಾರರು ಜನಿಸಿದ ಕಾಲವದು, ಸ್ಥಳಿಯ, ರಾಜ್ಯ, ರಾಷ್ಟ್ರೀಯ ಬರಹಗಾರರು ತಾವು ಕಂಡಂತೆ ಚರಿತ್ರೆ ಬರವಣಿಗೆ ಕ್ರಮ ಆರಂಭಸಿದಾದರೂ ,

ಬ್ರಿಟೀಷ್ ಪ್ರಭಾವ ಮತ್ತು ಮಾದರಿಯನ್ನೇ ಅನುಸರಿಸಿದರು. ಜಾನಪದ ಹಾಡುಗಳಲ್ಲಿಯೇ ಜೀವಂತವಾಗಿದ್ದ ಕೊಡಗು ನಾಡು, ಕುಲಮಾತೆ ಕಾವೇರಿಯ ಜನ್ಮ ಕಥನ, ತಲೆಮಾರುಗಳಿಂದ ಪೂಜಿಸಲ್ಪಡುತ್ತಿರುವ ದೇವರುಗಳ ಕಥನ, ಕೊಡಗುನಾಡಿನ ಜನಜೀವನ, ಸಾಂಸ್ಕೃತಿಕ ಐತಿಹ್ಯ ಇವೆಲ್ಲಾವನ್ನು ಒಗ್ಗೂಡಿಸಿ ಕೊಡಗಿನ ಇತಿಹಾಸವನ್ನು ಜನಪದೀಯ ನೆಲೆಯಲ್ಲಿ ಕಟ್ಟಿಕೊಟ್ಟವರಲ್ಲಿ ಮೊದಲಿಗರೆಂದರೇ ಕೊರವಂಡ ಅಪ್ಪಯ್ಯ. ಇವರು ರಚಿಸಿದ ಕೃತಿ "ಕೊಡವರ ಕುಲಾಚಾದ್ರಿ ತೇಜೋವ್ವಿನಿ". ಕೊಡವ ಹಾಗೂ ಕನ್ನಡ ಭಾಷೆ ಮಿಶ್ರಿತ ಕೃತಿಯನ್ನು ನಡಿಕೇರಿಯಂಡಚಿಣ್ಣಪ್ಪನವರು"ಪಟ್ಟೋಲೆ ಪಳಮೆ" ಎನ್ನುವ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿ ಮೌಖಿಕ ಸಾಹಿತ್ಯವನ್ನು ಸಾಹಿತ್ಯಲೋಕಕ್ಕೆ ಪರಿಚಯಿಸಿದ ಕೀರ್ತಿ ಇವರದು. ಒಟ್ಟಾರೆ ಈ ಕೃತಿಯಲ್ಲಿ ಕೊಡವರ ಆಚಾರ–ವಿಚಾರ, ಸಂಪ್ರದಾಯ, ನಂಬಿಕೆ, ಸಮುದಾಯಗಳು ಮತ್ತು ಜಾತಿ ಪದ್ಧತಿಗಳ ಕುರಿತು ವಿವರಿಸಿದ್ದಾರೆ.

ಅಪ್ಪನೆರವಂಡ ಹರದಾಸ ಅಪ್ಪಚ್ಚಕವಿ ವಿರಚಿತ ನಾಲ್‌ನಾಟಕ ಈ ಕೃತಿಯಲ್ಲಿ ಸಾಮಾಜಿಕ ಕಳಕಳಿ ಹಾಗೂ ವಸಾಹತುಶಾಹಿ ಆಡಳಿತ ಜನತೆಗೆ ಒಡ್ಡಿದ ಸವಾಲುಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಕನ್ನಡ ಲಿಪಿಯನ್ನು ಬಳಸಿಕೊಂಡು ವಸಾಹತುಶಾಹಿ ಶೋಷಣೆಯನ್ನು ಕೊಡವ ಭಾಷೆಯಲ್ಲಿ ಕುರಿತು ವಿವರಿಸಿದರು.

ನಡಿಕೇರಿಯಂಡ ಚಿಣ್ಣಪ್ಪ , ಪಟ್ಟೋಲೆ ಪಳಮೆ (2006) : ಕೊಡಗುನಾಡಿನ ಆಚಾರ–ವಿಚಾರ, ಪದ್ಧತಿ–ಪರಂಪರೆ, ಸಮಾಜೋ–ಧಾರ್ಮಿಕ ಕಟ್ಟುಪಾಡುಗಳು 19ನೇ ಶತಮಾನದವರೆಗೂ ಜನಪದೀಯವಾಗಿ ಹುದುಗಿಹೋಗಿದ್ದಂತಹ ಕಾಲಘಟ್ಟದಲ್ಲಿ ವಸಾಹತು ಬರವಣಿಗೆಗಳ ಮೂಲಕ ಕೊಡಗಿನ ಇತಿಹಾಸವನ್ನು ಬರೆದಿಡುವ ಕ್ರಮಗಳು ಆರಂಭಗೊಂಡವು. ಆದರೇ ಸ್ಥಳೀಯ ಕೊಡವ/ಕೊಡಗು ಭಾಷೆಯಲ್ಲಿ ಯಾವೊಂದು ಚಾರಿತ್ರಿಕ ಕೃತಿಯಾಗಲೀ ಅಥವಾ ಜಾನಪದ ಕೃತಿಯಾಗಲೀ ಹೊರಹೊಮ್ಮಿರಲ್ಲಿಲ್ಲ. 1924 ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿಯು ಸುಮಾರು ಆರು ಬಾರಿ ಯಶಸ್ವಿ ಮರುಮುದ್ರಣ ಕಂಡ ಕೊಡಗಿನ ಏಕೈಕ ಕೃತಿಯಾಗಿದೆ. ಇತ್ತೀಚೆಗೆ ಪಟ್ಟೋಲೆ ಪಳಮೆ ಕೃತಿಯನ್ನು ಸಂಪೂರ್ಣವಾಗಿ ಕೊಡವಭಾಷೆಯಲ್ಲಿ ದಾಖಲಿಸುವ ಕಾರ್ಯಕ್ರಮಗಳನ್ನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿದೆ. ವೃತ್ತಿಯಲ್ಲಿ ಮೊದಲಿಗೆ ಶಿಕ್ಷಕರಾಗಿ, ರೆವಿನ್ಯೂ ಇನ್‌ಸ್ಪೆಕ್ಟರ್, ಕೊಡಗು ರೆಜಿಮೆಂಟ್‌ನ ಸುಬೇದಾರನಾಗಿ ನಿವೃತ್ತಿ ಹೊಂದಿ ಪೋಲೀಸ್ ಇಲಾಖೆ ಸೇರಿಕೊಂಡ ನಡಿಕೇರಿಯಂಡ ಚಿಣ್ಣಪ್ಪನವರು ಈ ಕಾಲಾವಧಿಯಲ್ಲಿ ಸಂಸ್ಕೃತಿಯ ಭಾಗವಾದ ಹಾಡುಗಳ ಸಂಗ್ರಹ ಕಲೆಯನ್ನು ಬೆಳೆಸಿಕೊಂಡರು. ಕಾಲಾಂತರದಲ್ಲಿ ಅವುಗಳನ್ನು ಒಂದೆಡೆ ಬರೆಯಲಾರಂಭಿಸಿ, ಪುಸ್ತಕ ರೂಪದಲ್ಲಿ ಸರ್ಕಾರದ ನೆರವಿನೊಂದಿಗೆ ಪ್ರಕಟಿಸಿದ ಆದ್ಯ ಗ್ರಂಥ ಶೇಕಡ 90ರಷ್ಟು

ಕನ್ನಡ ಭಾಷೆಯಲ್ಲೂ ಇನ್ನುಳಿದವು ಕೊಡವ ಭಾಷೆಯಲ್ಲೂ ಕೊಡಗಿನ ಜಾನಪದ ಇತಿಹಾಸ ದಾಖಲಾದವು. ಪ್ರಮುಖ ಆರು ಅಧ್ಯಾಯಗಳಲ್ಲಿ ಕೊಡಗಿನ ಇತಿಹಾಸದ ವಿವರಣೆಗೆ ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗೆ ಸಹಕಾರಿಯಾದ ಈ ಕೃತಿಯು ಕೂಡಾ ಮಿತಿಗಳಿಂದ ಹೊರತಾಗಿಲ್ಲ. ಈ ಕೃತಿಯು ಕೊಡವ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಇನ್ನುಳಿದ ಭಾಷಿಕ ಸಮುದಾಯವನ್ನು ಕಡೆಗಣಿಸಿದಲ್ಲದೇ ಸಾಮಾಜಿಕ ಸಾಮರಸ್ಯದ ಬದುಕಿನಲ್ಲಿ ಅವುಗಳ ಪಾತ್ರವನ್ನು ನಿರ್ಲಕ್ಷ್ಯ ಮಾಡಲಾಗಿದೆ. ಕೊಡವ ಸಂಸ್ಕೃತಿಯ ಮೇಲೆ ರಚನೆಯಾದ ಕೃತಿಯು ಸಂಶೋಧನಾ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದಿದೆ.

ಕೃಷ್ಣಯ್ಯ. ಡಿ. ಎನ್. ಹಾಗೂ ಎಂ.ಎಸ್. ಸುಬ್ಬರಾಯರವರ ಸಂಪಾದನ ಕೃತಿ : ಕೊಡಗು ಸಂಸ್ಥಾನದ ರಾಜೇಂದ್ರನಾಮೆ (1957) (ಕೊಡಗು ರಾಜ್ಯದ ಚರಿತ್ರೆ ಇದರಲ್ಲಿ ಸೇರಿದೆ), ಈ ಕೃತಿಯಲ್ಲಿ ಕೊಡಗನ್ನು ಆಳ್ವಿಕೆ ಮಾಡಿದ ಹಾಲೇರಿ ರಾಜವಂಶದ ಕಾಲದಲ್ಲಿ ವೀರರಾಜೇಂದ್ರನಿಂದ ಬರೆಯಿಸಲ್ಪಟ್ಟ "ರಾಜೇಂದ್ರನಾಮೆ" ಕೊಡಗಿನ ಸ್ಥಳೀಯ ಇತಿಹಾಸ ದಾಖಲಾದ ಪ್ರಮುಖ ಐತಿಹಾಸಿಕ ಆಕರವಾಗಿದೆ. ಕೊಡಗಿನ ಇತಿಹಾಸವನ್ನರಿಯಲು ಪ್ರಾಕ್ತನ ಆಧಾರಗಳು ಲಭ್ಯವಿದ್ದರೂ ಲಿಖಿತ ಇತಿಹಾಸ ದಾಖಲಾಗಿದ್ದು ಮಾತ್ರ 17ನೇ ಶತಮಾನದಲ್ಲಿ. ಕ್ರಿ.ಶ. 1633ರ ಕಾಲಾವಧಿಯಲ್ಲಿ ಮೊದಲು ಪ್ರಚಲಿತದಲ್ಲಿದ್ದ ಸರಳ ಕನ್ನಡ ಭಾಷೆಯಲ್ಲಿ ಬರೆಸಿದ್ದು ತದನಂತರ ಲೆಫ್ಟಿನೆಂಟ್ ರಾಬರ್ಟ್ ಅಬರ್‌ಕಾಂಬ್ರಿಯಿಂದ ಇಂಗ್ಲೀಷ್ ಭಾಷೆಯಲ್ಲೂ ಬರೆಯಲ್ಪಟ್ಟವು. ಸಂಶೋಧನಾ ದೃಷ್ಟಿಯಿಂದ"ರಾಜೇಂದ್ರನಾಮೆ" ಕೃತಿಯು ಕೇವಲ ರಾಜಕೀಯ ಅಂಶಗಳನ್ನು ಮಾತ್ರ ಪರಿಗಣಿಸದೆ ಸಮಕಾಲೀನ ಸಮಗ್ರ ಅಂಶಗಳ ಬಗೆಗೆ ಗಮನಹರಿಸಿದೆ. ಪ್ರಮುಖ ಅಂಶಗಳಾದ ಹಾಲೇರಿ ವಂಶಾವಳಿಪಟ್ಟಿ, ಕೊಡಗು ರಾಜ್ಯದ ಮೇರೆ, ಅಲ್ಲಿ ಆಳ್ವಿಕೆಯಲ್ಲಿದ್ದ ರಾಜಮನೆತನಗಳು, ರಾಜಮಾರ್ಗಗಳು, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ಧಾರ್ಮಿಕ ಸ್ಥಿತಿಗತಿ ಆಂತರಿಕ ಹಾಗೂ ರಾಜತಾಂತ್ರಿಕ, ವಿದೇಶಿ ವ್ಯವಹಾರಗಳು, ಸ್ಥಳಪರಿಚಯ ಈ ಮುಂತಾದ ಅಂಶಗಳು ದಾಖಲಾದ ಪ್ರಮುಖ ಕೃತಿಯಾಗಿದೆ. ವೀರರಾಜೇಂದ್ರರ ಅಣತಿಯಂತೆ ಬರೆಯಲ್ಪಟ್ಟ ನಾಮೆಗಳು ಆಸಕ್ತಿದಾಯಕ ಹಲವು ಅಂಶಗಳ ಕಡೆಗೆ ಗಮನಹರಿಸುತ್ತದೆ ಆದರೆ ಕೆಲವೊಂದು ಮಿತಿಗಳಿಂದ ಇವುಗಳು ಹೊರತಾಗಿಲ್ಲ. ಐತಿಹಾಸಿಕ ಹಿನ್ನಲೆ ಹಾಗೂ ಸಂಶೋಧನಾ ದೃಷ್ಟಿಯಿಂದ ಕೊಡಗಿನ ಇತಿಹಾಸದ ಮೇರು ಕೃತಿಯೆನ್ನಬಹುದು.

ಡಾ.ಪೂಣಚ್ಚ ತಂಬಂಡ, ರಾಜೇಂದ್ರನಾಮೆ: ಮರು ಓದು, ಈ ಕೃತಿಯು ಕೊಡಗನ್ನು ಆಳ್ವಿಕೆ ಮಾಡಿದ ಹಾಲೇರಿ ಅರಸ ದೊಡ್ಡ ವೀರರಾಜನ ಕಾಲದಲ್ಲಿ ಬರೆಯಿಸಲ್ಪಟ್ಟ ರಾಜೇಂದ್ರನಾಮೆಯ ಕುರಿತು ಸತ್ಯಾನುಸತ್ಯತೆಯನ್ನು ಹಾಗೂ ಕೃಷ್ಣಯ್ಯ ಮತ್ತು ಸುಬ್ಬಯ್ಯನವರು ಸಂಪಾದಿಸಿದ ರಾಜೇಂದ್ರನಾಮೆ ಕೃತಿಯಲ್ಲಿನ ದೋಷಗಳನ್ನು ಎಳೆ ಎಳೆಯಾಗಿ ಓದುಗರಿಗೆ ವಿವರಿಸಿಕೊಡುತ್ತಾರೆ.

ರಿಲೀಜಿನ್ ಆಂಡ್ ಸೊಸೈಟಿ ಎಮಾಂಗ್ ದಿ ಕೂರ್ಗ್ಸ್ ಇನ್ ಸೌತ್ ಇಂಡಿಯಾ ಕೃತಿಯ ಕರ್ತೃ ಶ್ರೀನಿವಾಸ್ ಎಂ. ಎನ್ ರವರು ಸಮಾಜಶಾಸ್ತ್ರೀಯ ನೆಲೆಯಲ್ಲಿ ಕೊಡಗಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ವಿವರಿಸಿ ಕೊಡವರ ಧರ್ಮವನ್ನು ವೈಧಿಕ ಆಚರಣೆಯೊಂದಿಗೆ ಸಮೀಕರಿಸಿದ್ದು ಮರುಪರಿಶೀಲನೆಗೆ ಒಳಪಡಿಸಬೇಕಿದೆ. ಎಲ್.ಎ.ಕೆ.ಅಯ್ಯರ್ ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ ಕೃತಿಯು ಕೊಡಗಿನ ಕೊಡವರು ಮತ್ತು ಕೇವಲ ಕೆಲವೇ ಭಾಷಿಕ ಸಮುದಾಯಗಳನ್ನು ಮೂಲನಿವಾಸಿಗಳೆಂದು ಗುರುತಿಸಿ ಇತರರನ್ನು ಕಡೆಗಣಿಸಿರುವಂತಿದೆ. ಐ.ಮಾ. ಮುತ್ತಣ್ಣ ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ ಕೃತಿಯುಕೊಡಗಿನ ಚರಿತ್ರೆ ಹಾಗೂ ಕೊಡವರನ್ನೊಳಗೊಂಡಂತೆ ಅವರ ಜೀವನ, ಪದ್ಧತಿ–ಪರಂಪರೆಯನ್ನು ದಾಖಲಿಸಿದ್ದಾರೆ. ಡಾ. ಪಿ.ಎನ್.ಹರೀಶ್, ಯರವರ ಸಂಸ್ಕೃತಿ (2011) , ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ ಮೂಡಿಬಂದ ಕೃತಿಯೇ ಎರವರ ಸಂಸ್ಕೃತಿ. ಬಹುಸಂಸ್ಕೃತಿಯಿರುವ ಕೊಡಗಿನಲ್ಲಿ ಕೊಡಗಿನ ಎರವರನ್ನು ಉಪಸಂಸ್ಕೃತಿ ಎಂದು ಗುರುತಿಸಿ ಕ್ಷೇತ್ರಕಾರ್ಯ ನಡೆಸಿ ತಲೆತಲಾಂತರದಿಂದ ಜನಪದೀಯವಾಗಿ ಉಳಿದ ಎರವ ಭಾಷೆ, ಸಂಸ್ಕೃತಿ ಆಚಾರ–ವಿಚಾರವನ್ನು ದಾಖಲಿಸಿದ್ದಾರೆ.

ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಗಣಪತಿ.ಬಿ.ಡಿ. ಇವರು ಕೊಡವರ ಕುರಿತು ಕೊಡವಾಸ್ ದೆರ್ ಕಲ್ಚರ್ ಆಂಡ್ ಕಸ್ಟಮ್ಸ್ ಕೃತಿ ರಚಿಸಿ ಕೊಡವರ ಪದ್ಧತಿ–ಪರಂಪರೆಯನ್ನು ದಾಖಲಿಸಿದ್ದಾರೆ. ಈ ಕೃತಿಯು ಕನ್ನಡ ಮತ್ತು ಕೊಡವ ಭಾಷೆಗೂ ಭಾಷಾಂತರಿಸಲ್ಪಟ್ಟಿದೆ. ಅಶೋಕ ಆಳ್ವ.ಕೆ. ಕೊಡಗಿನ ಜಾನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ(2003) ಮಂಗಳ ಪ್ರಚಾರೋಪನ್ಯಾಸ ಮಾಲಿಕೆ ಹೊರತಂದ 33ನೇ ಕೃತಿ ಇದಾಗಿದ್ದು, ಈ ಕೃತಿಯಲ್ಲಿ ಕೊಡವರ ಆಚರಣೆಗಳು ಹಾಗೂ ವಿವಿಧ ಜಾನಪದ ಕುಣಿತಗಳು, ಅವುಗಳ ಪ್ರಕಾರಗಳು, ವೈಶಿಷ್ಟ್ಯತೆಗಳು ಹಾಗೂ ಐತಿಹಾಸಿಕ ಮಹತ್ವಗಳನ್ನೊಳಗೊಂಡಿದೆ. ಹುತ್ತರಿ ಕುಣಿತಗಳು ಹಾಗೂ ವಿವಿಧ ಜಾನಪದೀಯ ನೃತ್ಯಗಳ ಬಗೆಗೆ ಮಾಹಿತಿಯನ್ನು ನೀಡುವುದಲ್ಲದೆ , ಕೊಡವೇತರ ಮತ್ತು ಆದಿವಾಸಿ ಬುಡಕಟ್ಟುಗಳ ನೃತ್ಯಪ್ರಕಾರಗಳ ವೈಶಿಷ್ಟ್ಯಯನ್ನು ವಿವರಿಸುತ್ತದೆ. ಮುತ್ತಣ್ಣ. ಐ.ಎಮ್. ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ಇಂಡಿಯಾ(1953) ಬಹುಭಾಷಾ ಕೊಡವ ಸಾಹಿತಿ, ವಿದ್ವಾಂಸರು ಹಾಗೂ ಇತಿಹಾಸಕಾರರೂ ಆದ ಮುತ್ತಣ್ಣನವರು ಮಾತೃಭಾಷೆ ಕೊಡವ ಹಾಗೂ ಕೊಡಗಿನ ಸಾಹಿತ್ಯಲೋಕಕ್ಕೆ ಅನನ್ಯ ಕೊಡುಗೆ ನೀಡಿದವರಲ್ಲಿ ಪ್ರಮುಖರಾಗಿದ್ದಾರೆ. ದಕ್ಷಿಣ ಭಾರತದ ಪುಟ್ಟ ಜಿಲ್ಲೆ ಕೊಡಗಿನ ಇತಿಹಾಸವನ್ನು ಕೇಂದ್ರೀಕರಿಸಿದ ಈ ಕೃತಿಯು ಒಟ್ಟು 37 ಅಧ್ಯಾಯಗಳನ್ನು ಒಳಗೊಂಡಿದೆ. ಕೊಡಗು ನಾಡಿನ ಉಗಮ,

ಐತಿಹಾಸಿಕ ಪರಂಪರೆ , ಸಾಂಸ್ಕೃತಿಕ, ಆರ್ಥಿಕ , ಧಾರ್ಮಿಕ , ಆಡಳಿತಾತ್ಮಕ ಹಾಗೂ ಜನಪದೀಯ ಐತಿಹ್ಯವನ್ನು ಭಿನ್ನ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಕೃಷ್ಣಯ್ಯ. ಡಿ.ಎನ್. ಇವರು ಕೊಡಗಿನ ರಾಜಕೀಯ ಚರಿತ್ರೆಯನ್ನು ದಾಖಲಿಸಿದ ಮೊದಲಿಗರು. ಲಭ್ಯವಿದ್ದ ಶಾಸನಗಳು, ಹಾಲೇರಿ ಅರಸರಿಂದ ಬರೆಯಿಸಲ್ಪಟ್ಟ ಆಡಳಿತ ಅನುಶಾಸನಗಳು, ಹುಕ್ಕುಂನಾಮೆಗಳು ಇವೆಲ್ಲಾವುಗಳನ್ನು ಆಧಾರವಾಗಿಟ್ಟುಕೊಂಡು ಕೊಡಗಿನ ಚರಿತ್ರೆಯನ್ನು ವಸಾಹತು ನೆಲೆಗಿಂತ ಭಿನ್ನವಾಗಿ ರಚಿಸಿದ್ದಾರೆ. ಡಾ.ಡಿ.ಬಿ.ರಾಮಚಂದ್ರಾಚಾರ್‌ರವರ ಕೊಡಗು ಕೃತಿಯು ಕೊಡವ ಭಾಷಿಕ ಸಮುದಾಯದ ಆಚಾರ–ವಿಚಾರ, ಪದ್ಧತಿ–ಪರಂಪರೆಯನ್ನು 14 ವಿಶೇಷ ಶೀರ್ಷಿಕೆಯುಳ್ಳ ಲೇಖನಗಳಲ್ಲಿ ವಿವರಿಸಿದ್ದಾರೆ.ಡಾ.ಡಿ.ಬಿ.ರಾಮಚಂದ್ರಾಚಾರ್‌ರವರ ಕುಡಿಯರ ಸಂಸ್ಕೃತಿ, ಈ ಕೃತಿಯು ಕೊಡಗಿನ ಕುಡಿಯರ ಕುರಿತಾದ ಸಾಂಸ್ಕೃತಿಕ ಅಧ್ಯಯನವಾಗಿದ್ದು ಜೀವನ ವಿಧಾನ, ಸಂಸ್ಕೃತಿ, ಜನಪದ ಸಾಹಿತ್ಯ ಇವೆ ಮುಂತಾದ ನೆಲೆಗಟ್ಟಿನಲ್ಲಿ ವಿವರಿಸುತ್ತಾರೆ.

ನಾಗರಾಜ.ಎಂ.ಜಿ. ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ ಕೃತಿಯು ಕೊಡವ ಭಾಷಿಕ ಸಮುದಾಯವಾದ ಕೆಂಬಟ್ಟಿಗಳ ಜೀವನ ವಿಧಾನ, ಸಮಾಜದಲ್ಲಿ ಅವರ ಸ್ಥಾನಮಾನ, ಕೊಡವ ಸಂಸ್ಕೃತಿಯ ಆಚರಣೆಯಲ್ಲಿ ಕೆಂಬಟ್ಟಿಯವರ ಪಾಲುದಾರಿಕೆಯ ಕುರಿತು ಸಮಗ್ರ ಮಾಹಿತಿ ಕಲೆಹಾಕಿದ್ದಾರೆ.

ಟಿ.ಪಿ. ಪೂಣಚ್ಚನವರ ಆಧುನಿಕ ಕೊಡಗು, ಪಳಮೆ, ಕೊಡಗು ವಿವರಣೆ (ಸಂ), ರಾಜೇಂದ್ರನಾಮೆ: ಮರು ಓದು(ಸಂ), ಕಾಡು ಮಕ್ಕಳ ಕೂಗು(2022), ಅಮರಸುಳ್ಯ ಸಂಗ್ರಾಮ 1837 (2022) ಈ ಮುಂತಾದ ಕೃತಿಗಳು ಕೊಡಗಿನ ಚರಿತ್ರೆ, ಮೂಲನಿವಾಸಿಗಳು, ಜೀವನ ವಿಧಾನ ಇವೆಲ್ಲಾವುಗಳನ್ನು ವಿಮರ್ಶಾತ್ಮಕ ನೆಲೆಗಟ್ಟಿನಲ್ಲಿ ಚರ್ಚಿಸುತ್ತವೆ. ಹೆಬ್ಬಾಲೆ.ಕೆ. ನಾಗೇಶ್ ಕಾವೇರಿ ಜಾನಪದ, ಕೃತಿಗಳು ಕೊಡಗಿನ ಜೀವನಾಡಿ ಕಾವೇರಿ ನದಿಯ ಉಗಮ, ಹಿನ್ನಲೆ, ಸಾಂಸ್ಕೃತಿಕ ವೈಭವವನ್ನು ದಾಖಲಿಸಿದ್ದಾರೆ. ಇವರ ಮತ್ತೊಂದು ಕೃತಿ ಕೊಡವ ಪರಂಪರೆಯ ಸಾಂಸ್ಕೃತಿಕ ಪದಕೋಶ, ಈ ಕೃತಿಯ ಮುಖೇನ ಉಪಭಾಷೆಯಾದ ಕೊಡವ ಭಾಷೆಯ ಹಿನ್ನಲೆ ಮತ್ತು ಮಹತ್ವವನ್ನು ವಿವರಿಸುತ್ತದೆ. ಶಶಿಪ್ರಿಯ ಎಂಬ ಹೆಸರಿನಿಂದಲೇ ಚಿರಪರಿಚಿತರಾದ ಮೀನಿಕ್ಕಿರ. ಎಂ. ಮಹಮ್ಮದ್‌ರ ಕೊಡವ ಭಾಷಾ ದರ್ಶನ(2000) ಈ ಕೃತಿಯು ಕೊಡವ ಭಾಷೆಯ ಪ್ರಾಚೀನತೆಯ ಕುರಿತು ವಿವರಿಸುತ್ತದೆ. ಭೀಮಂಡ ಕುಶಾಲಪ್ಪನವರ ಕೃತಿ ಕೊಡಗು ಚರಿತ್ರೆಯ ಮೇಲೆ ಹೊಸಬೆಳಕು(2016) ಕೊಡಗುನಾಡಿನ ಚರಿತ್ರೆಯನ್ನು ವಿವಧ ಆಯಾಮಗಳಲ್ಲಿ ದಾಖಲಿಸಿದ್ದಾರೆ.ಪಿ.ಟಿ.ಬೋಪಣ್ಣ ಆರ್ ಕೊಡವಾಸ್ ಹಿಂದೂಸ್ ಕೃತಿಯಲ್ಲಿ ಶ್ರೀನಿವಾಸ್‌ರವರು ವ್ಯಕ್ತಪಡಿಸಿದ ಸಾಂಸ್ಕೃತೈಜೇಷನ್ ಸಿದ್ಧಾಂತವನ್ನು ಕುರಿತು ವಿಸ್ತೃತ ಚರ್ಚೆ ನಡೆಸಿದ್ದಾರೆ.

ಚಿಣ್ಣಪ್ಪ ಬೊವ್ವೆರಿಯಂಡ ಮತ್ತು ನಂಜಮ್ಮ , ಐನ್ಮನೆಸ್ ಆಫ್ ಕೊಡಗು, (2014) ಕೊಡಗಿನಾದ್ಯಂತ ಸಂಚರಿಸಿದ ದಂಪತಿಗಳು ಕೊಡವ ಹಾಗೂ ಕೊಡವ ಭಾಷಿಕ ಸಮುದಾಯದ ಕೌಟುಂಬಿಕ ಚಟುವಟಿಕೆಗಳ ಕೇಂದ್ರಸ್ಥಾನ ಐನ್ಮನೆಗಳನ್ನು ಕೇಂದ್ರೀಕರಿಸಿ ಕೊಡಗಿನಾದ್ಯಂತ ಕ್ಷೇತ್ರಕಾರ್ಯ ನಡೆಸಿ ಕೃತಿರಚಿಸಲು ಶ್ರಮಿಸಿದ್ದಾರೆ. ಪ್ರಮುಖ ಮೂರು ಅಧ್ಯಾಯದಲ್ಲಿ ಐನ್ಮನೆಗಳ ವಿಕಾಸ, ಐನ್ಮನೆಗಳ ವಿವಿಧ ಪ್ರಕಾರಗಳು, ಕೊಡವ ಭಾಷಿಕರಲ್ಲಿ ಅವುಗಳಿಗಿರುವ ಸ್ಥಾನಮಾನ ಹಾಗೂ ಐನ್ಮನೆಗಳ ಸಾಮಾಜಿಕಮತ್ತು ಸಾಂಸ್ಕೃತಿಕ ಮಹತ್ವವನ್ನು ಕುರಿತು ಐತಿಹಾಸಿಕ ಮಾಹಿತಿಯನ್ನು ದಾಖಲಿಸಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಐನ್ಮನೆಗಳನ್ನು ಈ ಕೃತಿಯಲ್ಲಿ ದಾಖಲಿಸಲಾಗದೇ ಉಳಿದವುಗಳನ್ನು ಡಬ್ಲ್ಯೂ.ಡಬ್ಲ್ಯೂ. ಡಬ್ಲ್ಯೂ. ಐನ್ಮನೆಸ್.ಕಾಮ್ ಎಂಬ ವೆಬ್‌ಸೈಟ್ ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಚಿಣ್ಣಪ್ಪ ಬೊವ್ವೆರಿಯಂಡ ಮತ್ತು ನಂಜಮ್ಮ, 2003 ರಲ್ಲಿ ಕೊಡವ ಭಾಷೆಯ ಜಾನಪದ ಕೃತಿಯೆಂದೇ ಪ್ರಶಂಸೆಗಳಿಸಿದ ಪಟ್ಟೋಲೆ ಪಳಮೆ ಕೃತಿಯನ್ನು ಇಂಗ್ಲೀಷ್ ಭಾಷೆಗೆ ಭಾಷಾಂತರಿಸುವ ಮೂಲಕ ಕನ್ನಡ ಲಿಪಿಯಲ್ಲಿದ್ದ ಕೃತಿಯನ್ನು ಅರ್ಥೈಸಲು ಸಾಧ್ಯವಾಗದ ಹಾಗೂ ಕೊಡಗಿನ ಬಗೆಗೆ ತಿಳಿದುಕೊಳ್ಳ ಬಯಸುವ ಇತರರಿಗೆ ನೆರವಾಗುವ ದೃಷ್ಟಿಕೋನದಿಂದ ಈ ಕ್ರಮ ಕೈಗೊಂಡು ಅಗತ್ಯವಿದ್ದಲ್ಲಿ ಚಿಣ್ಣಪ್ಪನವರ ಹಾಗೂ ನಂಜಮ್ಮನವರ ಟಿಪ್ಪಣಿಗಳನ್ನು ಅಧ್ಯಯನಕ್ಕೆ ಉಪಯುಕ್ತವಾಗುವಂತೆ ದಾಖಲಿಸಿದ್ದಾರೆ.

ಗಣಪತಿ. ಬಿ.ಡಿ. ಸ್ವಾತಂತ್ರ್ಯ ಹೋರಾಟ ಕೊಡಗಿನ ಕಥೆ (1965) , ಭಾರತದಾದ್ಯಂತ ವ್ಯಾಪಕವಾಗಿ ಹರಡಿದ ಸ್ವಾತಂತ್ರ್ಯ ಹೋರಾಟವು ಕೊಡಗನ್ನು ಆವರಿಸಿದುದರ ಬಗೆಗೆ ಹಾಗೂ ಕೊಡಗು ಕಾಂಗ್ರೇಸ್ ಸ್ಥಾಪನೆಗೆ ಸ್ಥಳೀಯರ ಸಹಭಾಗಿತ್ವ, ಬ್ರಿಟೀಷ್ ವಿರೋಧಿ ಹೋರಾಟದಲ್ಲಿ ಮಹಿಳೆಯರ ಪಾತ್ರ, ಕೊಡಗಿಗೆ ಗಾಂಧೀಜಿಯವರ ಭೇಟಿ, ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ತೀವ್ರಗೊಂಡ ಸ್ವಾತಂತ್ರ್ಯದ ಕೂಗು ಹಾಗೂ ದಾಸ್ಯ ಮುಕ್ತ ಭಾರತ ಮತ್ತು ಸಿ. ರಾಜ್ಯವಾಗಿ ಕೊಡಗಿನ ಪಾತ್ರ, ಕೊಡಗಿನಲ್ಲಿ ಆಡಳಿತಾತ್ಮಕ ಬದಲಾವಣೆ ಇವುಗಳೆಲ್ಲಾವನ್ನು ಕುರಿತು ವಿವರಿಸಿದ್ದಾರೆ.

ರಾಮಾನುಜಂ , ಕೊಡವರು (1975), ಕೊಡಗು ಜಿಲ್ಲಾ ರಕ್ಷಣಾಧಿಕಾರಿಗಳಾಗಿದ್ದ ಶ್ರೀಯುತರು ಕೊಡಗಿನ ಇತಿಹಾಸದ ಕುರಿತು ಒಂಭತ್ತು ಅಧ್ಯಾಯಗಳಲ್ಲಿ ಕೊಡಗಿನ ಕೊಡವ ಸಮುದಾಯದ ಕುರಿತು ವಿಸ್ತೃತ ಅಧ್ಯಯನ ಕೈಗೊಂಡಿದ್ದು, ಕೊಡವರ ಮೂಲ ಹಾಗೂ ಐತಿಹಾಸಿಕ ಪರಂಪರೆ ಬೆಳೆದು ಬಂದ ಬಗೆಗೆ ಚರ್ಚಿಸಿದ್ದಾರೆ. ಡೀನಾ ಬೋಜಣ್ಣ, ಕಂಬೆಯಂಡ , ಕೊಡಗಿನ ಮುಂದ್‌ಮನೆ, ಕೈಮಡ , ಮಂದ್‌ಗಳು ಶ್ರೀಮಂತ ಪರಂಪರೆ (2017) ಕೊಡವ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಲ್ಪಟ್ಟ ಈ ಕೃತಿಯು ಕೊಡಗಿನ ಸಾಮಾಜಿಕ ಬದುಕಿನ ಭಾಗವೆ ಆದ ಕುಟುಂಬ– ಐನ್ಮನೆ , ಧಾರ್ಮಿಕ ಬದುಕಿನ ಕೊಂಡಿಯಂತಿರುವ

ಕೈಮಡಗಳು ಹಾಗೂ ಸಾಂಸ್ಕೃತಿಕ ಪರಂಪರೆಯ ಕೇಂದ್ರ ಸ್ಥಾನ ಮಂದ್‌ಗಳು ಇವೆಲ್ಲಾವುಗಳ ಐತಿಹಾಸಿಕ ಹಿನ್ನಲೆ, ಅವುಗಳ ರಚನೆ , ವಿನ್ಯಾಸ, ವೈಶಿಷ್ಟ್ಯತೆ ಮುಂತಾದ ವಿಚಾರಗಳಿಂದ ಕೂಡಿದ್ದು ಸಾಂಸ್ಕೃತಿಕ ಇತಿಹಾಸ ರಚನೆಗೆ ಸಹಾಯಕವಾಗಿವೆ. ನಾಗೇಶ್ ಕಾಲೂರುರವರ ಕೊಡವಭಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು, ಈ ಕೃತಿಯು ಕೊಡವ ಭಾಷಿಕಜನಾಂಗದ ಹಿನ್ನಲೆ, ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಹಬ್ಬಗಳ ವೈಶಿಷ್ಟ್ಯತೆಯನ್ನು ದಾಖಲಿಸಿದ್ದಾರೆ. ಐತಿಚಂಡ ರಮೇಶ್ ಉತ್ತಪ್ಪ, ಪೂಮಲೆ ಕುಡಿಯ ಈ ಕೃತಿಯು ಕೊಡವ ಭಾಷಿಕರೇ ಆದ ಕುಡಿಯ ಸಮುದಾಯವನ್ನು ಕುರಿತಾಗಿದ್ದು ಕುಡಿಯರ ಮೂಲ, ಜೀವನ ವಿಧಾನ, ಸಾಂಸ್ಕೃತಿಕ ಆಚರಣೆ, ಧಾರ್ಮಿಕ ನಂಬಿಕೆ ಇವೆ ಮುಂತಾದ ವಿಷಯಗಳನ್ನು ದಾಖಲಿಸಿದ್ದಾರೆ. ಕೊಡವ ಭಾಷಿಕ ಮೂಲನಿವಾಸಿಯ (ಸಂ) ಈ ಕೃತಿಯು ವಿವಿಧ ಲೇಖಕರಿಂದ ಮಾಹಿತಿ ಸಂಗ್ರಹಿಸಿ ಪ್ರಕಟಿಸಲ್ಪಟ್ಟಿದ್ದು ಕೊಡವ ಭಾಷೆಯಲ್ಲಿದೆ.ಕೊಡಗಿನ ಒಟ್ಟಾರೆ 21 ಸಮುದಾಯಗಳ ಪಟ್ಟಿ ಹಾಗೂ ವಿವರಗಳನ್ನೊಳಗೊಂಡಿದೆ, ಆದರೇ ಸಮಗ್ರ ಇತಿಹಾಸ ದಾಖಲು ಮಾಡುವಲ್ಲಿ ವಿಫಲವಾಗಿದೆ. ಕಾವೇರಿ ಪ್ರಕಾಶ್‌ರವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಕೊಡವರ ಸಂಸ್ಕಾರಗಳು, ಕೊಡಗಿನ ಪ್ರಭಾವಶಾಲಿ ಸಮುದಾಯವನ್ನು ಕುರಿತಾಗಿದ್ದು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಆಚರಣೆ ಪದ್ಧತಿ–ಪರಂಪರೆಯನ್ನು ವಿಶ್ಲೇಷಿದ್ದಾರೆ.

ಶೈಲಜಾರವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಕೊಡಗುಗೌಡ ಸಂಪ್ರದಾಯದ ತೌಲನಿಕ ನೋಟ, ಈ ಪ್ರಬಂಧವು ಕೊಡಗಿನ ಸಮುದಾಯಗಳಾದ ಕೊಡವ ಮತ್ತು ಅರೆಭಾಷೆ ಗೌಡರ, ಪದ್ಧತಿ–ಪರಂಪರೆಯನ್ನು ತುಲನಾತ್ಮಕ ಅಧ್ಯಯನಕ್ಕೊಳಪಡಿಸಿದೆ. ಕಿರಣ್ ಪ್ರಸಾದ್‌ರವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಸೋಶಿಯಲ್ ಚೇಂಜ್ ಎಮಾಂಗ್ ದಿ ಕೆಂಬಟ್ಟಿಸ್ ,ಇದರಲ್ಲಿ ಕೊಡವಭಾಷಿಕರೇ ಆದ ಕೆಂಬಟ್ಟಿಗಳ ಜೀವನ ನಿರ್ವಹಣೆ, ಶಿಕ್ಷಣದ ಮಟ್ಟ ಇವೆಲ್ಲಾ ವಸಾಹತು ಕಾಲದಿಂದ ಬದಲಾವಣೆಗೊಳಪಟ್ಟ ಬಗೆಯನ್ನು ದತ್ತಾಂಶಗಳ ಸಹಿತ ವಿವರಿಸುತ್ತದೆ. ಎನ್.ಎಂ.ಪೂವಯ್ಯ ಕನ್ನಡ ವಿಶ್ವವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಮಹಾಪ್ರಬಂಧ ಕೊಡಗಿನ ಅವಿಭಕ್ತ ಕುಟುಂಬಗಳು, ಇದರಲ್ಲಿ ಕೊಡಗಿನಲ್ಲಿ ಅಸ್ತಿತ್ವದಲ್ಲಿದ್ದ ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ಸಂರಚನೆ ಕಾಲದಿಂದ ಕಾಲಕ್ಕೆ ಬದಲಾವಣೆಗೊಳಪಟ್ಟಿರುವ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ರೇವತಿ. ಸಿ.ಎಂ. ಕನ್ನಡ ವಿಶ್ವವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಮಹಾಪ್ರಬಂಧ ಕೊಡಗಿನ ತೆರೆಕಟ್ಟುವ ಆಚರಣೆ(2020) ಇದರಲ್ಲಿ ಕೊಡಗಿನಲ್ಲಿ ತಲೆತಲಾಂತರದಿಂದ ಕಾಯ್ದರಿಸಿಕೊಂಡಿರುವ ಹಿರಿಯರ ಆರಾಧನೆ ಹಾಗೂ ಅಂತಹ ಆಚರಣೆಯ ಸಂಧರ್ಭದಲ್ಲಿ ಕೈಗೊಳ್ಳುವ ಧಾರ್ಮಿಕ ತೆರೆಕಟ್ಟುವ ಸಂಪ್ರದಾಯದ

ಕುರಿತು ಮತ್ತು ತೆರೆಕಟ್ಟುವ ಮೂಲದಲ್ಲಿ ಇಂದು ಕೊಡವ ಭಾಷಿಕರೆಂದೇ ಗುರುತಿಸುವ ಮಲಿಯ, ಪಣಿಕ, ಬಣ್ಣ, ಮರ್ಥ ಇವರೆಲ್ಲಾರ ಮೂಲ, ಐತಿಹಾಸಿಕ ಹಿನ್ನಲೆ, ವಿವಿಧ ತೆರೆಗಳು, ದೈವಾವೇಶ ಇವೇ ಮುಂತಾದ ವಿಚಾರಗಳ ಕುರಿತು ಸಾಂಸ್ಕೃತಿಕ ಅಧ್ಯಯನ ಕೈಗೊಂಡಿದ್ದಾರೆ.

ಎಂ.ಬಿ.ಕಾವೇರಪ್ಪನವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಕೊಡಗಿನ ಕೃಷಿ ಸಂಸ್ಕೃತಿ (2022). ಕೊಡಗಿನ ಸಮುದಾಯಗಳಲ್ಲಿ ಅಸ್ತಿತ್ವದಲ್ಲಿರುವ ಕೃಷಿ ಚಟುವಟಿಕೆ ಹಾಗೂ ಅವುಗಳ ಐತಿಹಾಸಿಕ ಹಿನ್ನಲೆಯನ್ನು ಚರ್ಚಿಸಿದ್ದಾರೆ.

2022ರಲ್ಲಿ ಕೊಡವ ಸಾಹಿತ್ಯ ಅಕಾಡೆಮಿ ಪ್ರಕಟಪಡಿಸಿದ ಸಂಶೋಧನಾ ಕೃತಿಗಳಾದ ತೀತಿರ. ರೇಖಾ ವಸಂತ್‌ರವರ ಕೊಡವ ರಂಗಭೂಮಿ, ಕಾಮೆಯಂಡ ಕಲ್ಪನಾರವರ ಕೊಡಗಿನ ಪಾರಂಪರಿಕ ಆಭರಣ ಹಾಗೂ ಶಸ್ತ್ರಾಸ್ತ್ರಗಳ ಹಿನ್ನಲೆ, ಐತಿಚಂಡ ರಮೇಶ್‌ರವರ ಕೊಡವ ಸಂಸ್ಕೃತಿ ಮತ್ತು ಮಹಿಳೆ ಪಾತ್ರ ಹಾಗೂ ಪ್ರಭಾವ, ಅಡ್ಡಂಡ ಕಾರ್ಯಪ್ಪನವರ ಕೊಡವ ರಂಗಭೂಮಿಯ ಕೊಡವತನ, ರಾಧಿಕಾ ಕುಟ್ಟಪ್ಪನವರ ಪನ್ನಂಗಾಲ ತಮ್ಮೆ ಆಚರಣೆ, ರಿನಿ ಚಿಣ್ಣಪ್ಪನರ ವುಮನ್ ಇನ್ ಟೈಗರ್ ಹಿಲ್ಸ್ ಈ ಮುಂತಾದ ಕೃತಿಗಳು ಕೊಡವ ಸಂಸ್ಕೃತಿಯನ್ನು ವಿವಿಧ ನೆಲೆಗಟ್ಟಿನಲ್ಲಿ ಚರ್ಚಿಸಿದ್ದಾರೆ.

ವಿಜಯ್ ಪೂಣಚ್ಚ ತಂಬಂಡ, ಕಾಡು ಮಕ್ಕಳ ಕೂಗು ಕೊಡಗು ದಲಿತ ಬುಡಕಟ್ಟು ನಾಯಕರ ಕಥನಗಳು ಜೀವನ–ಸಂಸ್ಕೃತಿ–ಹೋರಾಟ (2022) ಕೃತಿಯು ಕೊಡಗಿನ ದಲಿತ ವರ್ಗದ ಬದುಕನ್ನು ಕೇಂದ್ರೀಕರಿಸಿದ್ದು ವಿವಿಧ ಜನಸಮುದಾಯಗಳು ಎದುರಿಸಿದ ಸಂಕಷ್ಟಗಳನ್ನು ಸಂದರ್ಶನ ಮತ್ತು ಕ್ಷೇತ್ರಕಾರ್ಯದ ಮುಖೇನ ದಾಖಲಿಸುತ್ತಾರೆ. ವಿಜಯ್ ಪೂಣಚ್ಚ ತಂಬಂಡ, ಅಮರಸುಳ್ಯ ಸಂಗ್ರಾಮ 1837 ಕೊಡಗು ಪಶ್ಚಿಮಘಟ್ಟಗಳ ಚರಿತ್ರೆಯ ಸ್ಥಿತ್ಯಂತರಗಳ ಅಧ್ಯಯನ ಮತ್ತು ವಿಮರ್ಶೆ(2022) ಕರ್ನಾಟಕದ ಪುಟ್ಟ ಜಿಲ್ಲೆಯಾದ ಕೊಡಗನ್ನು ಆಳ್ವಿಕೆ ಮಾಡಿದ ರಾಜವಂಶಗಳು ಮತ್ತು ಕೊಡಗಿನ ರಾಜಕೀಯ, ಸಮಾಜ ಹಾಗೂ ಆರ್ಥಿಕ ಕ್ಷೇತ್ರದಲ್ಲಾದ ಬೆಳವಣಿಗೆಗಳನ್ನು ಹದಿಮೂರು ಅಧ್ಯಾಯಗಳಲ್ಲಿ ದಾಖಲಿಸಿದ್ದಾರೆ.

ಒಟ್ಟಾರೆ ಇಲ್ಲಿಯವರೆಗೆ ಕೊಡವ ಭಾಷಿಕರನ್ನು ಕುರಿತು ನಡೆಸಿದ ಸಂಶೋಧನಾ ಅಧ್ಯಯನಗಳು, ಪ್ರಕಟಗೊಂಡ ಕೃತಿಗಳು ಕೊಡಗಿನ ಪ್ರಮುಖ ಸಮುದಾಯವಾದ ಕೊಡವರು, ತಳಸಮುದಾಯಗಳಾದ ಕೆಂಬಟ್ಟಿ, ಕುಡಿಯ ಇವಿಷ್ಟನ್ನು ಮಾತ್ರ ಕೇಂದ್ರೀಕರಿಸಿದ್ದು ಇನ್ನುಳಿದ ಕೊಡವ ಭಾಷಿಕರನ್ನು ಗುರುತಿಸುವುದಾಗಲೀ ಇಲ್ಲವೇ ಕೊಡವ ಭಾಷಿಕ ಸಮುದಾಯಗಳ ಕುರಿತು ವಿಸ್ತೃತ ಅಧ್ಯಯನ ಕೈಗೊಳ್ಳುವುದಾಗಲಿ ಕಂಡುಬಂದಿಲ್ಲವಾದ್ದರಿಂದ ಚಾರಿತ್ರಿಕ ಅಧ್ಯಯನಕ್ಕೆ ಕೊಡವ ಭಾಷಿಕ ಸಮುದಾಯದವರನ್ನೆಲ್ಲಾ ಆಯ್ಕೆ ಮಾಡಿಕೊಂಡು ಸಂಶೋಧನೆಗೆ ಒಳಪಡಿಸಿ ಕೊಡಗಿನ ಅಸ್ತಿತ್ವ ಹಾಗೂ

ಕೊಡವ ಭಾಷೆ, ಕೊಡವ ಸಂಸ್ಕೃತಿ, ಅಸ್ಮಿತೆಯ ಉಳಿವಿಗಾಗಿ ಇವರ ಪಾತ್ರ ಹಾಗೂ ಇವೇ ಮುಂತಾದ ಅಂಶಗಳನ್ನು ಕೇಂದ್ರೀಕರಿಸಿ ಸಮಗ್ರ ಅಧ್ಯಯನ ಕೈಗೊಂಡಿರುತ್ತೇನೆ.

ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ:

ಕೊಡಗಿನ ಕೊಡವ ಭಾಷಿಕ ಸಮುದಾಯಗಳ ಚಾರಿತ್ರಿಕ ಅಧ್ಯಯನ : ಸಮಾಜ ಮತ್ತು ಸಂಸ್ಕೃತಿ ಮಹಾಪ್ರಬಂಧ ಅಧ್ಯಯನಕ್ಕೆ ಜನಪದೀಯ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ನೆಲೆಯಿಂದ ರೂಪುಗೊಂಡಿದ್ದು, ಒಂದೇ ಭೌಗೋಳಿಕ ನೆಲೆಯಲ್ಲಿ ವಾಸಿಸುತ್ತಿರುವ 21ಕೊಡವ ಮಾತೃ ಭಾಷಿಕ ಮೂಲನಿವಾಸಿ ಸಮುದಾಯಗಳನ್ನು ಆಯ್ಕೆ ಮಾಡಿಕೊಂಡಿದ್ದು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನವು ಕೊಡಗು ಜಿಲ್ಲೆಗೆ ಸೀಮಿತವಾದರೂ ಮೂಲ ಮತ್ತು ಪರಂಪರೆಯನ್ನು ಅರಿತುಕೊಳ್ಳಲು ರಾಜ್ಯದ ಉದ್ದಗಲಗಳಲ್ಲಿ ನೆಲೆಸಿರುವ ಆಚಾರ ವಿಚಾರಗಳಲ್ಲಿ ಹೋಲಿಕೆಯಿರುವ ವಿವಿಧ ಸಮುದಾಯಗಳನ್ನು ಆಯ್ದುಕೊಳ್ಳಲಾಗಿದೆ. ಅಧ್ಯಯನದ ವಿಷಯಕ್ಕೆ ಪೂರಕವಾಗಿ ಕೊಡಗಿನ ಚರಿತ್ರೆ, ಭಾಷೆ, ಮೂಲನಿವಾಸಿಗಳು, ಸಮಾಜ, ಸಂಸ್ಕೃತಿ, ಪದ್ಧತಿ–ಪರಂಪರೆ, ಜಾನಪದ, ಮುಂತಾದ ವಿಚಾರಗಳ ಬಗ್ಗೆ ಲಭ್ಯವಿರುವ ಆಕರಗಳನ್ನು ಪರಿಶೀಲಿಸಿ ವಿಮರ್ಶೆಗೊಳಪಡಿಸಿ ಈ ಕೆಳಗಿನ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸುವುದು.

- ಪ್ರಾಥಮಿಕ ಮತ್ತು ಮಾಧ್ಯಮಿಕ ಆಕರಗಳು ಹಾಗೂ ದತ್ತಾಂಶ ಸಂಗ್ರಹಣೆ
- ಕ್ಷೇತ್ರಕಾರ್ಯ
- ಸಂದರ್ಶನ
- ಬಹುಮಾಧ್ಯಮಗಳಾದ ವೃತ್ತ ಪತ್ರಿಕೆಗಳು, ರೇಡಿಯೋ ಧ್ವನಿಸುರುಳಿಗಳು, ಸಾಕ್ಷ್ಯ ಚಿತ್ರಗಳು ಮತ್ತು ಅಂತರ್ಜಾಲ ತಾಣಗಳು ಇವೇ ಮುಂತಾದ ಆಕರಗಳ ಮೂಲಕ ಮೌಲ್ಯಯುತ ಅಧ್ಯಯನ ನಡೆಸಿ ಕೊಡಗು ಜಿಲ್ಲೆಯಾದ್ಯಂತ ನೆಲೆಸಿರುವ ಕೊಡವ ಭಾಷಿಕ ಮೂಲನಿವಾಸಿಗಳ ಸಮಾಜ ಮತ್ತು ಸಂಸ್ಕೃತಿಯನ್ನು ದಾಖಲಿಸುವುದಾಗಿದೆ.

ಅಧ್ಯಯನದ ಸ್ವರೂಪ

ಕೊಡಗಿನ ಕೊಡವ ಭಾಷಿಕ ಸಮುದಾಯಗಳ ಚಾರಿತ್ರಿಕ ಅಧ್ಯಯನ : ಸಮಾಜ ಮತ್ತು ಸಂಸ್ಕೃತಿ ಎಂಬ ಸಂಶೋಧನಾ ಪ್ರಬಂಧವನ್ನು ಅಧ್ಯಯನದ ದೃಷ್ಟಿಯಿಂದ ಆರು ಅಧ್ಯಾಯಗಳಾಗಿ ವರ್ಗೀಕರಿಸಲಾಗಿದೆ.

ಅಧ್ಯಾಯ: 01 ಪೀಠಿಕೆ

ಅಧ್ಯಾಯ: 02 ಕೊಡಗಿನ ಭೌಗೋಳಿಕ ಹಿನ್ನಲೆ

ಅಧ್ಯಾಯ: 03 ಕೊಡವ ಭಾಷಿಕ ಸಮುದಾಯಗಳ ಪರಿಚಯ

ಅಧ್ಯಾಯ: 04 ಕೊಡವ ಭಾಷಿಕ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿ

ಅಧ್ಯಾಯ: 05 ಕೊಡವ ಭಾಷಿಕ ಸಮುದಾಯಗಳ ಸಾಮರಸ್ಯದ ಬದುಕು ಹಾಗೂ ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಕೊಡವ ಭಾಷಿಕರು

ಅಧ್ಯಾಯ: 06 ಸಮಾರೋಪ.

ಮೊದಲನೇ ಅಧ್ಯಾಯದಲ್ಲಿ ಪೀಠಿಕೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಇತಿಹಾಸ ಲೇಖನವನ್ನು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕೊಡಗುನಾಡಿನ ಉಗಮ ಮತ್ತು ಚರಿತ್ರೆ, ಭೌಗೋಳಿಕ ಹಾಗೂ ರಾಜಕೀಯ ಇತಿಹಾಸವನ್ನು ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಕೊಡಗಿನ ಕೊಡವ ಭಾಷಿಕ ಸಮುದಾಯಗಳೆಂದರೆ ಯಾರು?, ಅವುಗಳು ಯಾವುವು?, ಅವರ ಮೂಲ ನೆಲೆಗಳು ಮತ್ತು ಮೂಲ ನೆಲೆ ಸಿದ್ಧಾಂತಗಳು, ಮಾತೃಭಾಷೆ–ಕೊಡಗು/ ಕೊಡವ ಭಾಷೆಯ ಇತಿಹಾಸ, ಕೊಡಗಿನ ಕೊಡವ ಭಾಷಿಕ ಸಮುದಾಯಗಳ ನೆಲೆಗಳ ವಿವರಗಳನ್ನು ಚರ್ಚಿಸಲಾಗಿದೆ ಮತ್ತು ಅಳಿವಿನ ಅಂಚಿನಲ್ಲಿರುವ ಭಾಷಿಕ ವರ್ಗವನ್ನು ಗುರುತಿಸಲಾಗಿದೆ ಹಾಗೂ ಪ್ರತೀ ಕೊಡವ ಭಾಷಿಕ ವರ್ಗದಲ್ಲಿರುವ ಐತಿಹಾಸಿಕ, ಸಾಮಾಜಿಕ ಮತ್ತು ಆಚರಣಾ ಪದ್ಧತಿಯನ್ನು ಗುರುತಿಸಿ ವಿಶ್ಲೇಷಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಕೊಡಗಿನ ಭೌಗೋಳಿಕ ಪರಿಸರಕ್ಕೆ ಹೊಂದಿಕೊಡಿರುವ ಕೊಡವ ಭಾಷಿಕ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಾದ ಕುಟುಂಬ ಪದ್ಧತಿ/ ವಕ್ಕ, ಜನರ ವೃತ್ತಿ, ಸ್ತ್ರೀಯರ ಸ್ಥಾನಮಾನ ಹಾಗೂ ಕೊಡವ ಭಾಷಿಕ ಸಮುದಾಯಗಳ ಪದ್ಧತಿ–ಪರಂಪರೆಗಳು ಒಂದಕ್ಕೊಂದು ಸಹಕಾರಿಯಾಗಿ ಕೊಡವ ಸಂಸ್ಕೃತಿಯ ಬೆಳವಣಿಗೆಗೆ ಕೊಡುಗೆ ನೀಡುತ್ತಿರುವ ಕುರಿತು ವಿಮರ್ಶಿಸಲಾಗಿದೆ.

ಅಲ್ಲದೆ ಸಂಸ್ಕೃತಿಯೊಳಗೊಂದು ವಿಭಿನ್ನ ಸಂಸ್ಕೃತಿಯನ್ನು ಅನುಸರಿಸುತ್ತಿರುವ ಭಾಷಿಕ ಸಮುದಾಯದ ಚಾರಿತ್ರಿಕ ಅಂಶಗಳು ಮತ್ತು ಸಾಂಸ್ಕೃತಿಕ ಅಂಶಗಳನ್ನು ವಿವರಿಸಲಾಗಿದೆ.

ಐದನೇಯ ಅಧ್ಯಾಯದಲ್ಲಿ ಒಗ್ಗಟ್ಟಿನ ಪ್ರತೀಕಗಳಾದ ಮಂದ್ ಹಾಗೂ ಇತರ ಸ್ಥಳೀಯ ಧರ್ಮಾಚರಣೆಗಳ ಸಂಧರ್ಭಗಳಾದ ಬೋಡ್ ನಮ್ಮೆ, ತೆರೆ ಕಟ್ಟುವ ಆಚರಣೆಗಳ ಸಂಧರ್ಭದಲ್ಲಿ, ವೈವಾಹಿಕ ಆಚರಣೆಗಳಲ್ಲಿ ಪ್ರದರ್ಶಿಸುವ ಐಕ್ಯತೆ ಹಾಗೂ ತಲೆಮಾರುಗಳಿಂದ ಚಾಲ್ತಿಯಲ್ಲಿರುವ ಕೊಡವ ಭಾಷಿಕ ಸಮುದಾಯಗಳ ನಡುವಿನ ಸಾಮರಸ್ಯದ ಬದುಕನ್ನು ಕ್ಷೇತ್ರಕಾರ್ಯದ ಮುಖೇನ ದಾಖಲಿಸಲಾಗಿದೆ ಹಾಗೂ ಆಧುನಿಕತೆಗೆ ಹೆಚ್ಚಾಗಿ ಒಗ್ಗಿಕೊಂಡಿರುವ ಸಮುದಾಯಗಳ ಪೈಕಿ ಕೊಡಗಿನವರು ಪ್ರಮುಖರು. ಇಂತಹ ಸಾಮಾಜಿಕ ಪರಿವರ್ತನೆಯಲ್ಲಿ ಕೊಡಗಿನ ಕೊಡವ ಭಾಷಿಕ ಸಮುದಾಯಗಳ ಪಾತ್ರವನ್ನು ವಿವಿಧ ನೆಲೆಗಟ್ಟಿನಲ್ಲಿ ವಿವರಿಸಲಾಗಿದೆ

ಆರನೇಯ ಅಧ್ಯಾಯ ಸಮಾರೋಪದಲ್ಲಿ ಒಟ್ಟು ಅಧ್ಯಯನದ ಫಲಿತವನ್ನು ಹಾಗೂ ಸಂಶೋಧನಾ ಅಧ್ಯನಕ್ಕಿರುವ ಮುಂದಿನ ಸಾಧ್ಯತೆಗಳನ್ನು ಚರ್ಚಿಸಲಾಗಿದೆ.

ಅಧ್ಯಯನದ ಕ್ಷೇತ್ರಗಳು:

ಭೌಗೋಳಿಕವಾಗಿ ವಿಸ್ತರಿಸಿರುವ ಕೊಡವ ಭಾಷಿಕರನ್ನು ಪ್ರಸ್ತುತ ಕೊಡಗಿನ ಐದು ತಾಲೂಕುಗಳಲ್ಲಿ ಗುರುತಿಸಬಹುದಾಗಿದೆ.

- ವಿರಾಜಪೇಟೆ ತಾಲೂಕು
- ಮಡಿಕೇರಿ ತಾಲೂಕು
- ಸೋಮವಾರಪೇಟೆ ತಾಲೂಕು
- ಪೊನ್ನಂಪೇಟೆ ತಾಲೂಕು
- ಕಾವೇರಿ ತಾಲೂಕು

ಅಧ್ಯಯನದ ಮಿತಿಗಳು:

ಪ್ರಸ್ತುತ ಅಧ್ಯಯನಕ್ಕೆ ಸಮಯದ ಮಿತಿ ಇರುವ ಹಿನ್ನಲೆಯಲ್ಲಿ ಅಧ್ಯಯನ ಕ್ಷೇತ್ರವಾಗಿ ಕೊಡಗನ್ನು ಹಾಗೂ ಕೊಡಗಿನಲ್ಲಿ ತಲೆಮಾರುಗಳಿಂದ ನೆಲೆನಿಂತಿರುವ ಕೊಡವ ಭಾಷೆಯನ್ನು ಮಾತೃಭಾಷೆಯಾಗಿ ಬಳಸುತ್ತಿರುವ ಕೊಡವ ಭಾಷಿಕ ಸಮುದಾಯವನ್ನು ಮಾತ್ರ ಮಹಾಪ್ರಬಂಧದ ವಸ್ತುವಿಷಯವನ್ನಾಗಿ

ಆಯ್ಕೆಮಾಡಿಕೊಳ್ಳಲಾಗಿದೆ. ಇಲ್ಲಿನ ಆದಿವಾಸಿಗಳು, ಬುಡಕಟ್ಟು ವರ್ಗವನ್ನು ಹಾಗೂ ಕೊಡವೇತರ ಭಾಷಿಕ ಸಮುದಾಯವನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗುತ್ತಿಲ್ಲ.

- ಇತಿಹಾಸದಲ್ಲಿ ಕಾಲನಿರ್ಣಯ ಅತೀ ಮುಖ್ಯ ಪಾತ್ರವಹಿಸುತ್ತದೆ. ಆದರೆ ಮಾನವ ಸಮಾಜ ಮತ್ತು ಸಂಸ್ಕೃತಿ ನಾಗರೀಕತೆಯೊಂದಿಗೆ ನಿರಂತರ ವ್ಯವಹರಿಸುವುದರಿಂದ ಪ್ರಸ್ತುತ ಅಧ್ಯಯನವು ಚಾರಿತ್ರಿಕವಾಗಿದ್ದರೂ ಕೂಡಾ ನಿರ್ದಿಷ್ಟ ಕಾಲಘಟ್ಟವನ್ನು ನಿರ್ಧರಿಸಿಕೊಂಡಿಲ್ಲ. ಆಧುನಿಕ ಸ್ಥಿತ್ಯಂತರಗಳ ನಡುವೆಯು ಕೊಡವ ಭಾಷಿಕರ ಸಂಸ್ಕೃತಿ ಹೇಗೇ ಜೀವಂತಿಕೆಯನ್ನು ಉಳಿಸಿಕೊಂಡಿದೆ ಎನ್ನುವುದನ್ನು ವಿಶಾಲ ತಳಹದಿಯಲ್ಲಿ ಚರ್ಚಿಸಿದೆ.
- ಕೊಡವ ಭಾಷಿಕರಂತೆ ಜೀವನ ನಿರ್ವಹಿಸುತ್ತಿರುವ ಕೊಡಗಿನ ಜನಜೀವನದ ಭಾಗವೇ ಆಗಿರುವ ಅರಮನೆ ಪಾಲೆ ಸಮುದಾಯ ಮತ್ತು ಕೊಡಗಿನ ಯರವರನ್ನು ಇಲ್ಲಿ ಕೈಬಿಡಲಾಗಿದೆ.
- ಕೊಡವ ಸಂಪ್ರದಾಯದಂತೆ ಜನನದಿಂದ ಮರಣದವರೆಗೂ ಇರುವ ಸಂಪ್ರದಾಯವನ್ನು ಅನುಸರಿಸುತ್ತಾರೆ, ಪತ್ತಾಕವನ್ನು ಧರಿಸುತ್ತಾರೆ, ಸೀರೆ ಉಡುವ ಪದ್ಧತಿ ಕೊಡವರನ್ನು ಹೋಲುತ್ತದೆ, ಸೈನ್ಯದಲ್ಲಿ ಕಾರ್ಯ ನಿರ್ವಹಿಸುತ್ತಾರೆ, ಗುರುಕಾರೋಣನನ್ನು ಆರಾಧಿಸುತ್ತಾರೆ, ಆದರೆ ಇವೆರಡು ಸಮುದಾಯಗಳು ತಮ್ಮದೆ ಆದ ಸ್ವತಂತ್ರ ಭಾಷೆಯನ್ನು ಬಳಸುತ್ತಿದ್ದಾರೆ.
- ಕೊಡಗಿನ ಮೂಲನಿವಾಸಿಗಳಲ್ಲೊಂದಾದ ಕುಡಿಯರ ಮತ್ತೊಂದು ಪಂಗಡವಾದ ತೇಮಲೆ ಕುಡಿಯರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿಲ್ಲ.
- ಮೂಲತಃ ತುಳುನಾಡಿನಿಂದ ಕೊಡಗಿಗೆ ಬಂದು ನೆಲೆಸಿದ ಅರೆಭಾಷೆ ಗೌಡರು ತಮ್ಮದೆ ಆದ ಸ್ವತಂತ್ರ ಭಾಷೆಯನ್ನಾಡುತ್ತಾರೆ. ಆದರೆ ಅದೇ ಸಮುದಾಯಕ್ಕೆ ಸೇರಿದ ಜೈನಿರ ಎಂಬ ಕೊಡಗು ಗೌಡ ಮನೆತನದ ಮಾತೃಭಾಷೆ ಕೊಡವ ಭಾಷೆ ಆಗಿದೆ. ಈ ರೀತಿಯ ವಿಷಯಗಳನ್ನು ಕೇವಲ ಚರ್ಚೆಗೆತ್ತಿಕೊಳ್ಳಲಾಗಿದ್ದು ವಿಸ್ತೃತ ಅಧ್ಯಯನ ಕೈಬಿಡಲಾಗಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನದ ವಸ್ತು ವಿಷಯವಾಗಿ ಕೊಡವ ಭಾಷೆಯನ್ನು ಮಾತೃಭಾಷೆಯಾಗಿ ಬಳಸುತ್ತಿರುವ ಸಮುದಾಯಗಳು ಹಾಗೂ ಅವರ ಸಮಾಜ ಮತ್ತು ಸಂಸ್ಕೃತಿಯನ್ನು ಮಾತ್ರವೆ ಪರಿಗಣಿಸಲಾಗಿದ್ದು, ಕೊಡವ ಭಾಷಿಕರ ಸಮಗ್ರ ಚಾರಿತ್ರಿಕ ಇತಿಹಾಸವನ್ನು ದಾಖಲು ಮಾಡುವ ಯತ್ನ ಕೈಗೊಂಡಿರುತ್ತೇನೆ.

ಪರಾಮರ್ಶನ ಗ್ರಂಥಗಳು

Primary Sources

Census and the government reports

1. 1.The Annual reports on the Administration of Coorg from 1864-1947 (K.A.S.P)
2. Census of India 1951, Vol-III, Madrass and Coorg, Part-I and Part-II, by S.Venkateshwaran, Government press,Madras, 1953.
3. Census of India 1981-Series-9, Karnataka District Census Handbook-Part XIII- A&B.
4. Census of India, Vol 3,Madras and Coorg part I Report, Madras, Government of India, 1953
5. Glossary of Castes ,Tribes and Races(Those in Part I and II of Table XIII)
6. Memorandum on the slavery in Coorg, 1834
7. Lindsay AWC. Coorg General Census,1871, Bangalore
8. Report on the Administration of Coorg for the year 1882-83, Mysore Government Press, 1884.
9. Reports on Education in Coorg From 1834-1882 by Lewia Rice(1882)
10. Reports on the Coorg Economic Committee-1935

Secondary Sources

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ ಪ್ರಕಟ ಪಡಿಸಿದ ಕೊಡವ ಬಾಷಾ ಕೃತಿಗಳು

1. ಅಪ್ಪಣ್ಣ ಬಾಚರಣಿಯಂಡ ಮತ್ತು ರಾಣು ಅಪ್ಪಣ್ಣ , ಕೊಡಗ್‌ರ ಆರ ಬೇರ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2001.
2. ಚಿಣ್ಣಪ್ಪ ನಡಿಕೇರಿಯಂಡ, ಪಟ್ಟೋಲೆ ಪಳಮೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 1924.
3. ಚಂಗಪ್ಪ.ಎಸ್.ಚೇನಂಡ.,ಕೊಡಗ್‌ಲಿಂಜ ಕೊಡವ ನಾಯಕಂಗ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2012
4. ಗಣಪತಿ ಬಿ.ಡಿ. , ನಂಗ ಕೊಡವ, ಜ್ಯೋತಿ ಪ್ರಕಾಶನ, ಮಡಿಕೇರಿ, 1973.
5. ಕೊಡವ ಬಾಷಿಕ ಮೂಲನಿವಾಸಿಯ(ಸಂ),ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,ಮಡಿಕೇರಿ. 2010.
6. ಮುತ್ತಪ್ಪ ಗ.ಚೇಂದ್ರೀಮಾಡ,ಇತಿಹಾಸ ಪಾಳೆಲಿಂಜ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2004.
7. ರಮೇಶ್ ಉತ್ತಪ್ಪ ಐತಿಚಂಡ ,ಪೂಮಾಲೆ ಕುಡಿಯ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2002.
8. ರಮೇಶ್ ಉತ್ತಪ್ಪ ಐತಿಚಂಡ , ಕೊಡವಾಮೆ ಪೋತುವೋ ಎನ್ನನೇ? ನಾಲೇ ನಾಲ್ ಮೊಟ್ಟ್‌ಡಿ ಮದಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2022
9. ರಾಜ ನಂಜಪ್ಪ ಚೆರಿಯಪ್ಪಂಡ , ಕೈಮಡಗಳು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2011.
10. ರಾಣು ಅಪ್ಪಣ್ಣ. ಬಾಚರಣಿಯಂಡ., ಕೊಡವ ಸಂಸ್ಕೃತಿ ಅಂದ್–ಇಂದ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2022.
11. ರಾಮಕೃಷ್ಣ.ಎಸ್.ವಿ.(ಅನು),ಕೊಡಗ್‌ರ ಬೀರಂಗಲ್ಲ್ ಕೊಡಗ್‌ರ ದೇವಕಾಡ್ ಕೊಡಗ್‌ರ ಪನ್ಯಭೂಮಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,ಮಡಿಕೇರಿ, 1997
12. ರೇಖಾ.ಎಂ.ಪಿ., ಕೊಡವ ರಂಗಭೂಮಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2022.
13. ಶಶಿ ಸುಬ್ರಮಣಿ ಕರೋಶಿರ, ನಂಬಿಕೆ ಪುರಾಣತ್‌ರ ನಡುಲ್ ಕೊಡವ ಸಾಂಸ್ಕೃತಿಕ ಬದ್‌ಕ್ , ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2014.

ಕನ್ನಡ ಬಾಷಾ ಕೃತಿಗಳು

1. ಅಂಬಳಿಕೆ ಹಿರಿಯಣ್ಣ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಸುವರ್ಣ ಕನಾಟಕ ವರ್ಷದ ನೆನಹು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2009.
2. ಅಶೋಕ ಆಳ್ವ ಕೆ. , ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ,ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2003.
3. ಭಾಮಿನಿ ರಾಘವಯ್ಯ, ಕೊಡಗಿನ ಬುಡಕಟ್ಟುಗಳು, ಪ್ರಸಾರಂಗ , ಮಾನಸಗಂಗೋತ್ರಿ, ಮೈಸೂರು 2007.
4. ಭಾರತದ ಗ್ಯಾಸೇಟಿಯರ್, ಸಂ–1, ದೇಶ ಹಾಗೂ ಜನರು,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಾನಾಲಯ, ಕರ್ನಾಡಕ ಸರ್ಕಾರ, ಬೆಂಗಳೂರು, 1986.

5. ಬೋರಲಿಂಗಯ್ಯ.ಹಿ.ಚಿ.(ಪ್ರ.ಸಂ),ಕನಾಟಕ ಜನಪದ ಕಲೆಗಳ ಕೋಶ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, 1996.
6. ಡೀನಾ ಬೋಜಣ್ಣ ಕಂಬೆಯಂಡ , ಕೊಡಗಿನ ಮುಂದ್ ಮನೆ, ಕೈಮಡ, ಮಂದ್‌ಗಳ ಶ್ರೀಮಂತ ಪರಂಪರೆ , ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2017.
7. ಗಂಗಾನಾಯಕ್.ಕೆ.ಎನ್., ಪಾಳೆಗಾರರ ಶಾಸನಗಳು ಸಂ.2, ಕುವೆಂಪು ಅಧ್ಯಯನಪೀಠ, ಮೈಸೂರು ವಿಶ್ವವಿದ್ಯಾನಿಲಯ, 2012.
8. ಹರೀಶ್.ಪಿ.ಎನ್., ಎರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು,2011.
9. ಹಾ.ಮಾ.ನಾಯಕ (ಪ್ರ.ಸಂ), ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1979.
10. ಹೆಬ್ಬಾಲೆ.ಕೆ.ನಾಗೇಶ್., ಕಾವೇರಿ ಜಾನಪದ,ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,2005
11. ಹೆಬ್ಬಾಲೆ.ಕೆ.ನಾಗೇಶ್.,ಕೊಡವ ಪರಂಪರೆಯ ಸಾಂಸ್ಕೃತಿಕ ಪದಕೋಶ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018
12. ಹೆಬ್ಬಾಲೆ.ಕೆ.ನಾಗೇಶ್., ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಸಮನ್ವಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011
13. ಜೋಗನ್ ಶಂಕರ್, ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು, 1995.
14. ಕಲ್ಪನಾ ಸಾಮ್ರಾಟ್. ಕಾಮೆಯಂಡ., ಕೊಡಗಿನ ಪಾರಂಪರಿಕ ಆಭರಣ ಹಾಗೂ ಶಸ್ತ್ರಾಸ್ತ್ರಗಳ ಹಿನ್ನಲೆ,2022
15. ಕಾಲೂರು ನಾಗೇಶ್ , ಕೊಡವ ಬಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು ,ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2013
16. ಕಾವೇರಿ ಪ್ರಕಾಶ್., ಕೊಡವರ ಸಂಸ್ಕಾರಗಳು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ,2016.
17. ಕುಶಾಲಪ್ಪ.ಈ.ಭೀಮಂಡ., ಕೊಡಗು: ಚರಿತ್ರೆ, ನಿವಾಸಿಗಳು ಮತ್ತು ಪ್ರಭಾವ, ರಾಘವೇಂದ್ರ ಪ್ರಿಂಟರ್ಸ್ ,ಮಡಿಕೇರಿ, 1993.
18. ಕುಶಾಲಪ್ಪ.ಈ. ಬೀಮಂಡ.,ಪರಿಷ್ಕೃತ ಆವೃತ್ತಿ ಕೊಡಗು ಚರಿತ್ರೆಯ ಮೇಲೆ ಹೊಸ ಬೆಳಕು, ಪ್ರಿಂಟ್ ಅವೆನ್ಯೂ , ಮೈಸೂರು, 2016.
19. ಕೃಷ್ಣಯ್ಯ ಡಿ.ಎನ್. ಕೊಡಗಿನ ಇತಿಹಾಸ , ಪ್ರಸಾರಂಗ, ಮೈಸೂರು 1974.
20. ಕೃಷ್ಣಯ್ಯ ಡಿ.ಎನ್. ಸುಂದರನಾಡು ಕೊಡಗು, ಮೈಸೂರು, 1967.
21. ಲಕ್ಕಪ್ಪಗೌಡ. ಎಚ್.ಎಂ.(ಪ್ರ.ಸಂ),ಕರ್ನಾಟಕ ಬುಡಕಟ್ಟುಗಳು, ಸಂ.1&2, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,ಬೆಂಗಳೂರು, 1998
22. ಲಲಿತ.ಕೆ.ಪಿ., ವಿರಾಜಪೇಟೆ ತಾಲೂಕಿನ ಸ್ಥಳನಾಮಗಳು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2015
23. ಲೋಕೇಶ್. ಕೆ.ಎಂ., ಕೊಡಗು ಪ್ರಾಂತ್ಯದಲ್ಲಿ ಕಂಡುಬರುವ ಜಾತಿಗಳು ಮತ್ತು ಬುಡಕಟ್ಟು ಜನಾಂಗಗಳ ವೃತ್ತಾಂತ ಸಂಹಿತೆ., (ಸಂ) ಕೊಡವ ಸಾಂಸ್ಕೃತಿಕ ಅದ್ಯಯನ ಪೀಠ, ಮಂಗಳೂರು, 2011.
24. ಮಹೇಶ ಡಿ. ಕಾಕ್ಯಾತರ(ಸಂ), ಸ್ಥಳೀಯ ಕುಲಕಸುಬುಗಳು ಮತ್ತು ಬದುಕು, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, 2021.

25. ಮುರಿಗೆಪ್ಪ.ಎ., ದಕ್ಷಿಣ ಭಾರತೀಯ ಜಾನಪದ ಕೋಶ, ಸಂ.1, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011
26. ಮೋಹನ ಕುಂಟಾರ್, ಕೇರಳ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006
27. ನಾಗರಾಜ್.ಎಂ.ಜಿ.ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ ,ಕೊಡವ ಸಾಂಸ್ಕೃತಿಕ ಅದ್ಯಯನ ಪೀಠ, ಮಂಗಳೂರು 2017.
28. ನಾಗರಾಜ್. ಎಂ.ಜಿ., ಕೊಡಗಿನ ಹಾಲೇರಿ ವಂಶ ಭಾಗ–1, ಭಾಗ–2, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂಸ್, ಹೊಸಪೇಟೆ, 2004.
29. ರಮೇಶ್ ಉತ್ತಪ್ಪ ಐತಿಚಂಡ , ಪೂಮಾಲೆ ಕುಡಿಯ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2002.
30. ರಹಮತ್ ತರಿಕೆರೆ, ಸಾಂಸ್ಕೃತಿಕ ಅಧ್ಯಯನ, ಅಭಿನವ ಪ್ರಕಾಶನ, 2017.
31. ರಮೇಶ್ ಉತ್ತಪ್ಪ ಐತಿಚಂಡ , ಕೊಡವ ಸಂಸ್ಕೃತಿ ಮತ್ತು ಮಹಿಳೆ ಪಾತ್ರ ಹಾಗೂ ಪ್ರಭಾವ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2022
32. ರಾಮಚಂದ್ರಚಾರ್ ಡಿ.ಬಿ., ಕೊಡಗು (ಒಂದು ನೋಟ) , ಸುನಂದ ಪ್ರಕಾಶನ, ವಿರಾಜಪೇಟೆ, 1998.
33. ರಾಮಚಂದ್ರಚಾರ್ ಡಿ.ಬಿ., ಪುತ್ತಾಮನೆಯ ಪುಟ್ಟ, ಸುನಂದ ಪ್ರಕಾಶನ, ವಿರಾಜಪೇಟೆ, 1995
34. ರಾಮಚಂದ್ರರಾವ್.ಬಿ.ಡಿ., ಕುಡಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, 1993.
35. ರಾಮಾನುಜಂ. ಪಿ.ಎಸ್., ಕೊಡವರು, ಪ್ರಸಾರಂಗ, ಮೈಸೂರು, 1975.
36. ರಾಧಿಕ ಕುಟ್ಟಪ್ಪ, ಪನ್ನಂಗಾಲತಮ್ಮೆ ಮತ್ತು ಕೆಂಬಟ್ಟಿ ಸಮುದಾಯ ಆಚರಣೆ ಮತ್ತು ಅನನ್ಯತೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2022.
37. ರೇಖಾ ಎಂ.ಪಿ., ಆಧುನಿಕ ಕೊಡವ ಸಾಹಿತ್ಯ, ಸಿಂಚು ಮಲ್ಟಿಗ್ರಾಫ್, ಮೈಸೂರು, 2010.
38. ರೇಖಾ.ಎಂ.ಪಿ., ಕೊಡವ ರಂಗಭೂಮಿ, ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ, 2006
39. ರೇಖಾ ಚಿಣ್ಣಪ್ಪ ಬಿದ್ದಂಡ, ಸ್ವಾತಂತ್ರ್ಯ ಪೂರ್ವ ಕೊಡಗಿನ ರಾಜಕೀಯ ಪರಿಸ್ಥಿತಿ (1947), ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2017.
40. ರೇವತಿ ಪೂವಯ್ಯ ಮುಲ್ಲೆಂಗಡ, ಕೊಡವ ಜಾನಪದ ನೃತ್ಯಗಳು: ಒಂದು ಅದ್ಯಯನ , ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ,2014.
41. ಶಂಕರನಾರಾಯಣ.ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, 1982.
42. ಶಂಕರನಾರಾಯಣಭಟ್, ಎದುರ್ಕುಳ.ಕೆ., ಶ್ರೀ ಕಾವೇರಿ ವೈಭವ, ಶ್ರೀರಾಮಕೃಷ್ಣ ಪ್ರಕಾಶನ, ಭಾಗಮಂಡಲ,1978.
43. ಶಶಿಪ್ರಿಯ ಕೊಳಕೇರಿ, ಕೊಡವ ಭಾಷಾ ದರ್ಶನ, ಕಾವ್ಯಾಲಯ,ಜಯನಗರ,2000.
44. ಸೋಮಣ್ಣ ಹೊಂಗಳ್ಳಿ, ಕೊಡಗು ಜಿಲ್ಲೆಯ ಜನಪದ ಸಾಹಿತ್ಯ, ಉನ್ನತಿ ಪ್ರಕಾಶನ, ಮೈಸೂರು, 2018.
45. ಸೂರ್ಯನಾಥ್. ಯು.ಕಾಮತ್ , ಕೊಡಗು ಜಿಲ್ಲಾ ಗೆಜೆಟಿಯರ್, ಗವರ್ನಮೆಂಟ್ ಪ್ರೆಸ್, 1995.
46. ಉತ್ತಯ್ಯ ಚೆಟ್ಟಿಚ್ಚ ಬೊವ್ವೆರಿಯಂಡ ಮತ್ತು ತಂಗಮ್ಮ ಉತ್ತಯ್ಯ ಬೊವ್ವೇರಿಯಂಡ, ಕೊಡವ ಅರಿವೋಲೆ, ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ,2016.
47. ವಿಜಯ್ ಪೂಣಚ್ಚ, ತಂಬಂಡ, ಆಧುನಿಕ ಕೊಡಗು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
48. ವಿಜಯ್ ಪೂಣಚ್ಚ ತಂಬಂಡ., ಪಳಮೆ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.

49. ವಿಜಯ್ ಪೂಣಚ್ಚ, ತಂಬಂಡ, ಕೊಡಗು ವಿವರಣೆ (ಸಂ)ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.
50. ವಿಜಯ್ ಪೂಣಚ್ಚ, ತಂಬಂಡ, ಸಬಾಲ್ಟ್ರನ್ ಅಧ್ಯಯನ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
51. ವಿಜಯ್ ಪೂಣಚ್ಚ, ತಂಬಂಡ,ರಾಜೇಂದ್ರನಾಮೆ:ಮರು ಓದು(ಸಂ), ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018.
52. ವಿಜಯ್ ಪೂಣಚ್ಚ, ತಂಬಂಡ, ಪ್ರಸಾರಂಗ, ಅಮರಸುಳ್ಯ ಸಂಗ್ರಾಮ 1837 ಕೊಡಗು ಪಶ್ಚಿಮಘಟ್ಟಗಳ ಚರಿತ್ರೆಯ ಸ್ಥಿತ್ಯಂತರಗಳ ಅಧ್ಯಯನ ಮತ್ತು ವಿಮರ್ಶೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2022
53. ವಿಜಯ್ ಪೂಣಚ್ಚ, ತಂಬಂಡ, ಕಾಡುಮಕ್ಕಳ ಕೂಗು ಕೊಡಗು ದಲಿತ ಬುಡಕಟ್ಟು ನಾಯಕರ ಕಥೆಗಳು ಜೀವನ ಮತ್ತು ಸಂಸ್ಕೃತಿ–ಹೋರಾಟ, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು, 2022
54. ವಿಕ್ರಂ ಕಾಂತಿಕೆರೆ, ಕಾವೇರಿ ತೀರದ ಪಯಣ (ಅನು), ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್,2021. ಕಾವೇರಿ ಪ್ರಕಾಶ್, ಕೊಡವರ ಸಂಸ್ಕಾರಗಳು, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, 2016

English Books

1. Banies Athelstance , Ethnography Caste and Tribe, Concept Publishing house, Dehli, 1972
2. Bopanna.P.T., Are Kodavas(Coorgs) Hindus?, Rolling Stone Publications, Bangalore.2018
3. Connor, Memories of the Codagu Survey commonly with Koorg, Part I&II, Bangalore Central Jail Press, 1870.
4. Chinnappa Bovveriyanda and Nanjamma, Pattole Palame (Translated) Rupa.Co Publications , New Dehli , 2003.
5. Chinnappa Bovveriyanda and Nanjamma, Ainmanes of Kodagu, Niyogi Publications , New Dehli , 2014.
6. Ganapathy B.D., Kodavas (coorgs) Their culture and customs , Jyothi Prakashana, Temple Road, Madikeri, 1967.
7. Gopal Panikkar.J.K., Madras presidency with Mysore Coorg and associated State Gazetteer, Cambridge, 1913.
8. Hunter W.W., Extract of the Imperial Gazetter of India, Vol-IV(Coachin Ganguria),1885.
9. Hutton.J.H., Caste in India its nature,function and origins, Oxford University Press, London, 4th Edition, 1963.

10.Kosambi.D.D., The Culture and Civilization of Ancient India in Historical Outline, Vikas publishing private ltd, 2001.
11.Krishna Iyer. L.A., The Coorg Tribes and castes, Madras, 1948.
12.Mariappa Bhat., (Edited), Kittels Kannada-English Dictionary in 4 volumes, Vol-I a-ah,University of Madras, 1968.
13.Mariappa Bhat., (Edited), Kittels Kannada-English Dictionary in 4 volumes, Vol-II K- dh,University of Madras, 1969
14.Muthanna I.M., The Coorg Memoirs (The story of the Kodavas), Mysore, 1971.
15.Moegling.H., Coorg Memoirs:an account of Coorg and of the Coorg Mission, Bangalore, 1885.
16.Muthanna I.M., A Tiny Model State of South India, Coorg., 1953
17.Ponnappa K.C., Lt.Col, (Rtd), A Study of the Origins of Coorgs, Chettalli, 1997
18.Richter. G., Gazetteer of Coorg, Low price publications, Dehli, 1870.
19.Rice.B.L., Mysore and Coorg, Mysore government press,Bangalore, 1878.
20.Risely.H.H., The People of India, Secretrait Press, Calcutta, 1905.
21.Robert.A. Cole, A Manual of Coorg Civil Law, Mysore, Government Press, 1871
22.Satyan.B.N., Mysore State Gazetteer-Coorg District, Government Press, Bangalore, 1965
23.Suryanath.U.Kamath(Chief Editor), Gazetteer of India Karnataka State, Mysore District, Government Press, Bangalore, 1988.
24.Srinivas M.N., Religion and Society Among the Coorgs of South India, Media promoters and Publishers, Pvt.ltd., Bombay, 1989.
25.Subbaiah.K.K., Archeology of Coorg, Mysore.1978.
26.Surendra Rao and Lokesh KM (Edited), Coorg invented-Ninteenth century, European Writings on Kodagu, 1998.
27.Thurston Edger, The Madras presidency with Mysore Coorg and associated Stae Gazetteer, Cambridge,1913.
28.Thurston Edger, K.Rangacharlu, Castes and tribes of South India, Vol-I, A&B, government Press, Madrass, 1909.

ಅಪ್ರಕಟಿತ ಸಂಶೋಧನಾ ಪ್ರಬಂಧಗಳು

1. ಅರೋನ್ ಪ್ರದೀಪ್ ಕುಮಾರ್., (2015), ಎ ಸ್ಟಡಿ ಆನ್ ಡಿಪೆನ್‌ಡೆನ್ಸ್ ಆಫ್ ಮಲೆಕುಡಿಯ ಟ್ರೈಬ್ ಆನ್ ಮೈನರ್ ಫಾರೆಸ್ಟ್ ಪ್ರೊಡ್ಯೂಸರ್ಸ್ ಫಾರ್ ಲೈವ್ಲಿಹುಡ್– ಎ ಸೋಷಿಯೋಲಾಜಿಕಲ್ ಸ್ಟಡಿ, ಮೈಸೂರು ವಿಶ್ವವಿದ್ಯಾನಿಲಯ

2. ಅಹ್ಮದ್ ಹೈದರಿ., (2015) ಟ್ರೆಡಿಷನಲ್ ಡ್ರೆಸ್ ಪ್ಯಾಟರ್ನ್ ಐಂಡ್ ಕ್ಲೋತಿಂಗ್ ಎಮಾಂಗ್ ಕೊಡವಾಸ್ ಆಫ್ ಕೂರ್ಗ್: ಆ್ಯನ್ ಅನ್‌ಥ್ರೋಪಾಲಾಜಿಕಲ್ ಸ್ಟಡಿ.,ಮೈಸೂರು ವಿಶ್ವವಿದ್ಯಾನಲಯ.
3. ಚಲುವರಾಜು, (2020), ಕೊಡಗಿನ ಜಾತ್ರೆಗಳ ಅಧ್ಯಯನ,ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಪಿ.ಎಲ್.ಧರ್ಮ (1994)ಪೊಲಿಟಿಕಲ್ ಮೊಬಿಲೈಜೇಶನ್ ಐಂಡ್ ಪಾರ್ಟಿಸಿಪೇಶನ್ ಇನ್ ಕೊಡಗು ಡಿಸ್ಟ್ರಿಕ್ಟ್ ಸಿನ್ಸ್ 1956: ಆ್ಯನ್ ಅನಾಲಿಸಿಸ್ ಕರ್ನಾಟಕ ಯೂನಿವಸಿಟಿ, ಧಾರವಾಡ.
5. ಗೀತಾ.ಎ.ಸಿ. (2019)ಸಾಂಸ್ಕೃತಿಕ ನೆಲೆಗಟ್ಟಿನ ಹಿನ್ನಲೆಯಲ್ಲಿ ಕೊಡಗಿನ ಆಚಾರ ವಿಚಾರಗಳು, ಬೆಂಗಳೂರು ವಿಶ್ವವಿದ್ಯಾನಿಲಯ
6. ಕಾವೇರಪ್ಪ. ಎಂ.ಬಿ., (2022) ಕೊಡಗಿನ ಕೃಷಿ ಸಂಸ್ಕೃತಿ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳೂರು.
7. ಕಿರಣ್ ಪ್ರಸಾದ್ ಬಿ., (2011) , ಸೋಷಿಯಲ್ ಚೇಂಜ್ ಎಮಾಂಗ್ ಕೆಂಬಟ್ಟಿ ಕಮ್ಯುನಿಟಿ , ಮಂಗಳೂರು ವಿಶ್ವವಿದ್ಯಾನಿಲಯ.
8. ಮಲ್ಲಿಕಾರ್ಜುನ.ಬಿ(1982) ಎ ಡಿಸ್ಕ್ರಿಪ್ಟಿವ್ ಅನಾಲಿಸಿಸ್ ಆಫ್ ಎರವ, ಕರ್ನಾಟಕ ಯೂನಿವಸಿಟಿ, ಧಾರವಾಡ.
9. ಪೂಣಚ್ಚ. ಟಿ.ಪಿ., (1993)ಜಮ್ಮ ಸಿಸ್ಟಂ ಇನ್ ಕೊಡಗು: ಇಟ್ಸ್ ಸೋಷಿಯೋ ಇಕಾನಾಮಿಕ್ ಡೈಮೆನ್ಷನ್ಸ್ (1800–1980), ಮಂಗಳೂರು ವಿಶ್ವವಿದ್ಯಾನಿಲಯ.
10. ಶೈಲಜಾ. ಎ.ಸಿ. (2014) , ಕೊಡವರು ಮತ್ತು ಕೊಡಗಿನ ಅರೆಭಾಷೆ ಗೌಡರ ಸಂಸ್ಕೃತಿ–ತೌಲನಿಕ ನೋಟ, ಮೈಸೂರು ವಿಶ್ವವಿದ್ಯಾನಿಲಯ
11. ಶಾಂತಪ್ಪ. ಎಸ್.ವೈ. (2021) , ಆದಿವಾಸಿಗಳ ಕುರಿತ ಪ್ರಭುತ್ವದ ದೃಷ್ಟಿಕೋನ: ತಾತ್ವಿಕ ವಿವೇಚನೆ(ಕೊಡಗು ಜಿಲ್ಲೆಯನ್ನು ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯ, ಹಂಪಿ.
12. ರೇಖಾ. ಎಂ.ಪಿ., ಕಲ್ಚರ್ ಸ್ಟಡಿ ಆಫ್ ಕೊಡವಾಸ್ ಹೌಸ್, ಯುಜಿಸಿ ಮೈನರ್ ರಿಸರ್ಚ ಪ್ರಾಜೆಕ್ಟ್

ನಿಯತಕಾಲಿಕೆಗಳು

1. ಅಸೀಮಾ
2. ಹೊಸತು
3. ಚರಿತ್ರೆ ಅಧ್ಯಯನ
4. ಇತಿಹಾಸ ದರ್ಪಣ
5. ಶೋಧ
6. ಅರುಹು–ಕುರುಹು
7. ಚಿಂತನ ಬಯಲು

Websites

www.censusindia.gov.in

kannadasiri.kr.nic.in

Google Scholar

Shodhganga

Archives.org